# www.karunaduexams.com

ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್- ಫೆಬ್ರುವರಿ,2017

www.karunaduexams.com

1. ಇತ್ತೀಚೆಗೆ ಕೇಂದ್ರದ ಮಾಜಿ ಸಚಿವ ಹಾಗೂ ಸಂಸದ ಇ. ಅಹ್ಮದ್ ಅವರು ನಿಧನರಾದರು. ಅಹ್ಮದ್ ಅವರು ಯಾವ ರಾಜ್ಯದ ಲೋಕಸಭಾ ಸದಸ್ಯರಾಗಿದ್ದರು?

   ಅ) ಕೇರಳ

   ಆ) ತಮಿಳುನಾಡು

   ಇ) ಗುಜರಾತ್

   ಈ) ರಾಜಸ್ತಾನ

   ಕೇರಳ

   ಕೇರಳದ ಮಲ್ಲಾಪುರಂ ಲೋಕಸಭಾ ಕ್ಷೇತ್ರದ ಸಂಸದ ಇ. ಅಹ್ಮದ್ ಅವರು ಸಂಸತ್ ಕಲಾಪದ ವೇಳೆ ಹೃದಯಾಘಾತದಿಂದಾಗಿ ಕುಸಿದುಬಿದ್ದು ನಿಧನರಾಗಿದ್ದಾರೆ. ಅಹ್ಮದ್ ಅವರು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ರಾಷ್ಟ್ರೀಯ ಅಧ್ಯಕ್ಷರಾಗಿದ್ದರು. ಅಹ್ಮದ್ ಅವರು ಅತ್ಯುತ್ತಮ ಲೇಖಕರು ಸಹ ಆಗಿದ್ದರು. "ದಿ ಲೀಡರ್ ಐ ನೊ", "ಎ ಸ್ಟೋರಿ ಆಫ್ ಎ ರಿನೈಸನ್ಸ್ ಆಫ್ ಇಂಡಿಯನ್ ಮುಸ್ಲಿಂ" ಮತ್ತು "ಓನ್ ಫಾರಿನ್ ಜರ್ನಿ ಮತ್ತು ನ್ಯೂಮರಸ್ ಮೆಮೊರಿಸ್" ಇವರ ಪ್ರಸಿದ್ಧ ಪುಸ್ತಕಗಳು.

2. "ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘ (SAARC)"ದ 53ನೇ ಪ್ರೋಗ್ರಾಮಿಂಗ್ ಸಮಿತಿಯ ಸಭೆ ಯಾವ ದೇಶದಲ್ಲಿ ನಡೆಯಿತು?

   ಅ) ಭಾರತ

   ಆ) ನೇಪಾಳ

   ಇ) ಪಾಕಿಸ್ತಾನ

   ಈ) ಶ್ರೀಲಂಕಾ

   ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘ (SAARC)"ದ 53ನೇ ಪ್ರೋಗ್ರಾಮಿಂಗ್ ಸಮಿತಿಯ ಸಭೆ ನೇಪಾಳದ ಕಠ್ಮಂಡುವಿನಲ್ಲಿ ಫೆಬ್ರವರಿ 1 ರಿಂದ ಆರಂಭಗೊಂಡಿತು. ಸಾರ್ಕ್ ನ ಎಂಟು ಸದಸ್ಯ ರಾಷ್ಟ್ರಗಳ

www.karunaduexams.com

ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಭಾರತದಿಂದ ಸಾರ್ಕ್ ಜಂಟಿ ಕಾರ್ಯದರ್ಶಿ ಪ್ರಶಾಂತ್ ಅಗರವಾಲ್ ನೇತೃತ್ವದ ಪ್ರತಿನಿಧಿಗಳು ಭಾಗವಹಿಸಿದ್ದರು.

3. ಈ ಕೆಳಗಿನ ಯಾವ ನಿಯತಕಾಲಿಕೆಯನ್ನು "ಬೈಬಲ್ ಆಫ್ ದಿ ಕ್ರಿಕೆಟ್ (Bible of the Cricket)" ಎಂಬ ಗೌರವವನ್ನು ಹೊಂದಿದೆ?

ಅ) ಸ್ಪೋರ್ಟ್ಸ್ ಟುಡೇ

ಆ) ದಿ ಕ್ರಿಕೆಟರ್

ಇ) ವಿಸ್ಡೆನ್

ಈ) ಮೇಲಿನ ಯಾವುದು ಅಲ್ಲ

ವಿಸ್ಡೆನ್

ವಿಸ್ಡೆನ್ ಕ್ರಿಕೆಟಿಗರ ಅಲ್ಮ್ಯಾನ್ಯಾಕ್ (ಪಂಚಾಂಗ) (ವಿಸ್ಡೆನ್ ಎಂದೇ ಪ್ರಚಲಿತ) 'ಕ್ರಿಕೆಟ್ ಆಟದ ಬೈಬಲ್ ಎಂದು ಪರಿಗಣಿಸಲ್ಪಡುವ ಕ್ರಿಕೆಟ್ ಆಟಕ್ಕೆ ಸಂಭಂದಿಸಿದ ಮಾಹಿತಿ ಹೊಂದಿರುವ ಒಂದು ಪ್ರಸಿದ್ಧ ಮಾರ್ಗದರ್ಶಿಕೆ ಪುಸ್ತಕ. ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರ ಫೋಟೊವನ್ನು ವಿಸ್ಡೆನ್ ನಿಯತಕಾಲಿಕೆ ಮುಖಪುಟದಲ್ಲಿ ಪ್ರಕಟಿಸಲು ಆಯ್ಕೆಮಾಡಲಾಗಿದೆ. ಈ ಮೂಲಕ ಕೊಹ್ಲಿ ವಿಸ್ಡೆನ್ ಮುಖಪುಟದಲ್ಲಿ ಪ್ರಕಟಗೊಂಡ ಭಾರತದ ಎರಡನೇ ಆಟಗಾರ ಎಂಬ ಹೆಗ್ಗಳಿಕೆ ಪಾತ್ರರಾಗಿದ್ದಾರೆ. 2014ರಲ್ಲಿ ವಿಸ್ಡೆನ್, ಸಚಿನ್ ತೆಂಡೂಲ್ಕರ್ ಅವರ ಫೋಟೊವನ್ನು ತನ್ನ ಮುಖಪುಟದಲ್ಲಿ ಪ್ರಕಟಿಸಿತ್ತು.

4. "2017 ದಕ್ಷಿಣ ಏಷ್ಯಾ ಸ್ಪೀಕರ್ ಗಳ ಶೃಂಗಸಭೆ (South Asia Speakers Summit)" ಅತಿಥ್ಯವನ್ನು ವಹಿಸಲಿರುವ ರಾಷ್ಟ್ರ ಯಾವುದು?

ಅ) ಶ್ರೀಲಂಕಾ

ಆ) ಚೀನಾ

ಇ) ಭಾರತ

ಈ) ಬಾಂಗ್ಲದೇಶ

www.karunaduexams.com

ಭಾರತ

2017 ದಕ್ಷಿಣ ಏಷ್ಯಾ ಸ್ಪೀಕರ್ ಗಳ ಶೃಂಗಸಭೆ ಮಧ್ಯ ಪ್ರದೇಶದ ಇಂಧೋರ್ ನಲ್ಲಿ ಫೆಬ್ರವರಿ 18-19 ರಂದು ನಡೆಯಲಿದೆ. ದಕ್ಷಿಣ ಏಷ್ಯಾ ರಾಷ್ಟ್ರಗಳ ಸಂಸತ್ತಿನ ಸ್ಪೀಕರ್ ಗಳು ಶೃಂಗಸಭೆಯಲ್ಲಿ ಭಾಗವಹಿಸಲಿದ್ದು, ವಿಚಾರ ವಿನಿಮಯ ಮಾಡಿಕೊಳ್ಳಲಿದ್ದಾರೆ.

5. ಮಾಹಿತಿ ತಂತ್ರಜ್ಞಾನದ ಸಾಮರ್ಥ್ಯಾಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಈ ಕೆಳಕಂಡ ಯಾವ ವೇದಿಕೆಯನ್ನು ಪ್ರಾರಂಭಿಸಲಿದೆ?

ಅ) ಸಮರ್ಥ್

ಆ) ಸ್ವದೇಶ್

ಇ) ಸ್ವಯಂ

ಈ) ಸಾಕ್ಷರ್

ಸ್ವಯಂ

ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ರವರು 2017-18 ನೇ ಸಾಲಿನ ಕೇಂದ್ರ ಬಜೆಟ್ ನಲ್ಲಿ ಮಾಹಿತಿ ತಂತ್ರಜ್ಞಾನದ ಸಾಮರ್ಥ್ಯಾಭಿವೃದ್ಧಿಗಾಗಿ 'ಸ್ವಯಂ' ಎಂಬ ವೇದಿಕೆಯನ್ನು ಪ್ರಾರಂಭಿಸುವುದಾಗಿ ಘೋಷಿಸಿದ್ದಾರೆ. ಇದರಲ್ಲಿ ಕನಿಷ್ಠ 350 ಅಂತರ್ಜಾಲ ಆಧಾರಿತ ಕೋರ್ಸ್ ಗಳು ಒಳಗೊಂಡಿರಲಿದೆ. ಈ ಮೂಲಕ ವಿದ್ಯಾರ್ಥಿಗಳು ಅಂತರ್ಜಾಲ ಮುಖಾಂತರ ವಾಸ್ತವವಾಗಿ ವಿಷಯತಜ್ಞರಿಂದ ಪಾಠ ಪ್ರವಚನದ ಸೌಲಭ್ಯ, ಉತ್ಕೃಷ್ಟ ಮಟ್ಟದ ವಾಚನಾಲಯ, ಗುಂಪು ಚರ್ಚೆ ಸೇರಿದಂತೆ ಪರೀಕ್ಷೆಯಲ್ಲಿ ಭಾಗವಹಿಸಿ ಪ್ರಮಾಣಪತ್ರ ತೆಗೆದುಕೊಳ್ಳಬಹುದಾಗಿದೆ.

6. "ಬಿಟ್ವೀನ್ ಟು ವರ್ಲ್ಡ್ಸ್-ದಿ ಅಸ್ಸಾಮಿಸ್ ಸಿಖ್ಸ್ (Between Two Worlds- The Assamese Sikhs)" ಪುಸ್ತಕದ ಲೇಖಕರು ಯಾರು?

ಅ) ಶರತ್ ಲಾಲ್

ಆ) ಅಭಿಜಿತ್ ಭಂಡಾರಿ

www.karunaduexams.com

ಇ) ಸುರೇಂದ್ರ ನಾಥ್

ಈ) ಬಿಮಲ್ ಪೂಕನ್

ಬಿಮಲ್ ಪೂಕನ್

“ಬಿಟ್ವೀನ್ ಟು ವರ್ಲ್ಡ್ಸ್-ದಿ ಅಸ್ಸಾಮಿಸ್ ಸಿಖ್ಸ್” ಪುಸ್ಕಕವನ್ನು ಬಿಮಲ್ ಪೂಕನ್ ಬರೆದಿದ್ದಾರೆ. ಪುಸ್ತಕದಲ್ಲಿ ಗುರು ತೇಗ್ ಬಹುದ್ದೂರ್ ಅವರು 1669 ರಲ್ಲಿ ಅಸ್ಸಾಂಗೆ ಭೇಟಿ ನೀಡಿದ್ದರ ಬಗ್ಗೆ ಬೆಳಕು ಚೆಲ್ಲಲಾಗಿದೆ.

7. ಪಳೆಯುಳಿಕೆ ಇಂಧನ ಬಳಕೆಯನ್ನು ತ್ಯಜಿಸಿದ ವಿಶ್ವದ ಪ್ರಪ್ರಥಮ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿರುವ ದೇಶ ಯಾವುದು?

ಅ) ನಾರ್ವೆ

ಆ) ಐರ್ಲೆಂಡ್

ಇ) ಜಪಾನ್

ಈ) ಫಿಲಿಫೈನ್ಸ್

ಐರ್ಲೆಂಡ್

ಐರ್ಲೆಂಡ್ ದೇಶವು ಮುಂದಿನ 5 ವರ್ಷಗಳಲ್ಲಿ ಪಳೆಯುಳಿಕೆ ಇಂಧನ ಬಳಕೆಯನ್ನು ಅಂದರೆ ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ತ್ಯಜಿಸಲು ತನ್ನ ಸಂಸತ್ತಿನಲ್ಲಿ ಕಾಯ್ದೆಯನ್ನು ಜಾರಿಗೊಳಿಸಿದ್ದು, ತನ್ಮೂಲಕ ಪಳೆಯುಳಿಕೆ ಇಂಧನ ಬಳಕೆಯನ್ನು ತ್ಯಜಿಸಿದ ವಿಶ್ವದ ಪ್ರಪ್ರಥಮ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

8. ಸೂರಜ್ ಕುಂಡ್ ಅಂತರರಾಷ್ಟ್ರೀಯ ಕರಕುಶಲ ಮೇಳ 2017 ರಲ್ಲಿ ಯಾವ ರಾಜ್ಯದ ವಿಷಯವನ್ನಾಧಾರವಾಗಿಟ್ಟು ಆಯೋಜಿಸಲಾಗಿತ್ತು?

ಅ) ಅಸ್ಸಾಂ

ಆ) ರಾಜಸ್ತಾನ

www.karunaduexams.com

ಇ) ಜಾರ್ಖಂಡ್

ಈ) ತೆಲಂಗಾಣ

ಜಾರ್ಖಂಡ್

31ನೇ ಸೂರಜ್ ಕುಂಡ್ ಅಂತರರಾಷ್ಟ್ರೀಯ ಕರಕುಶಲ ಮೇಳ ಹರಿಯಾಣದ ಫರಿದಾಬಾದ್ ನಲ್ಲಿ ಫೆಬ್ರವರಿ 1 ರಿಂದ ಆರಂಭಗೊಂಡಿತು. ಹರಿಯಾಣ ಪ್ರವಾಸೋದ್ಯಮ ನಿಗಮ ಹಾಗೂ ಸೂರಜ್ ಕುಂಡ್ ಮೇಳ ಪ್ರಾಧಿಕಾರ ಈ ಮೇಳವನ್ನು ಆಯೋಜಿಸುತ್ತಿವೆ. ಸುಮಾರು 20 ರಾಷ್ಟ್ರಗಳು ಹಾಗೂ ದೇಶದ ಎಲ್ಲಾರಾಜ್ಯಗಳು ಮೇಳದಲ್ಲಿ ಭಾಗವಹಿಸಲಿವೆ. ಈಜಿಪ್ಟ್ ಈ ಬಾರಿಯ ಮೇಳದ ಪಾಲುದಾರಿಕೆ ರಾಷ್ಟ್ರವಾಗಿದ್ದು, ಜಾರ್ಖಂಡ್ ರಾಜ್ಯ ಥೀಮ್ ರಾಜ್ಯವಾಗಿದೆ.

9. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯುಕ್ತಾಲಯದ ಈಗಿನ ಅಧ್ಯಕ್ಷರು ಯಾರು?

ಅ) ಸ್ತುತಿ ನರೇನ್ ಕಾಕರ್

ಆ) ಚಂದ್ರಪ್ರಭಾ

ಇ) ಕುಶಾಲ್ ಸಿಂಗ್

ಈ) ಕೆ.ಎಸ್.ಭಾರ್ಗವ

ಸ್ತುತಿ ನರೇನ್ ಕಾಕರ್

10. ಭಾರತದ “ತಾಂತ್ರಿಕ ಶಿಕ್ಷಣ ಗುಣಮಟ್ಟ ಅಭಿವೃದ್ಧಿ ಕಾರ್ಯಕ್ರಮ” (TEQIP III) 3 ನೇ ಹಂತದ ಯೋಜನೆಗೆ ವಿಶ್ವ ಬ್ಯಾಂಕ್ ಎಷ್ಟು ಮೊತ್ತವನ್ನು ಮಂಜೂರು ಮಾಡಿದೆ?

ಅ) $220.5 ಮಿಲಿಯನ್

ಆ) $201.5 ಮಿಲಿಯನ್

www.karunaduexams.com

ಇ) $225.5 ಮಿಲಿಯನ್

ಈ) $227.5 ಮಿಲಿಯನ್

$201.5 ಮಿಲಿಯನ್

ಭಾರತದ "ತಾಂತ್ರಿಕ ಶಿಕ್ಷಣ ಗುಣಮಟ್ಟ ಅಭಿವೃದ್ಧಿ ಕಾರ್ಯಕ್ರಮ" (TEQIP III) 3 ನೇ ಹಂತದ ಯೋಜನೆಗೆ ಕೇಂದ್ರ ಸರ್ಕಾರ ವಿಶ್ವ ಬ್ಯಾಂಕ್ ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಇದರನ್ವಯ ವಿಶ್ವ ಬ್ಯಾಂಕ್ $201.5 ಮಿಲಿಯನ್ ಧನಸಹಾಯ ನೀಡಲಿದೆ. ಉತ್ತರಾಖಂಡ, ಹಿಮಾಚಲ ಪ್ರದೇಶ, ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಛತ್ತೀಸ್ ಘಡ, ರಾಜಸ್ಥಾನ, 8 ಈಶಾನ್ಯ ರಾಜ್ಯಗಳು ಮತ್ತು ಅಂಡಮಾನ್ ಮತ್ತು ನಿಕೋಬರ್ ರಾಜ್ಯಗಳ ಇಂಜಿನಿಯರಿಂಗ್ ಕಾಲೇಜುಗಳ ಶಿಕ್ಷಣ ಗುಣಮಟ್ಟವನ್ನು ಉನ್ನತೀಕರಿಸುವ ಮತ್ತು ಅಭಿವೃದ್ಧಿಪಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

11. ಕೇಂದ್ರ ಆಯವ್ಯಯ 2017-18 ರನ್ವಯ ಭಾರತೀಯ ರಿಸರ್ವ ಬ್ಯಾಂಕ್ ಅಧೀನದಲ್ಲಿ 'ಪಾವತಿ ನಿಯಂತ್ರಣ ಮಂಡಳಿ' ಅಸ್ತಿತ್ವಕ್ಕೆ ಬರಲಿದೆ, ಈ ಮಂಡಳಿಯ ಅಧ್ಯಕ್ಷರು ಯಾರಾಗಿರುತ್ತಾರೆ?

ಅ) ಹಣಕಾಸು ಸಚಿವಾಲಯದ ಕಾರ್ಯದರ್ಶಿ

ಆ) ಹಣಕಾಸು ಸಚಿವ

ಇ) ಪ್ರಧಾನ ಮಂತ್ರಿ

ಈ) ರಿಸರ್ವ್ ಬ್ಯಾಂಕ್ ಗವರ್ನರ್

ರಿಸರ್ವ್ ಬ್ಯಾಂಕ್ ಗವರ್ನರ್

12. ಗ್ರಾಮೀಣ ಭಾರತದಲ್ಲಿ ಡಿಜಿಟಲ್ ವ್ಯವಹಾರವನ್ನು ಪ್ರೋತ್ಸಾಹಿಸುವ ಸಲುವಾಗಿ "ಭಾರತ್ ನೆಟ್ ಪ್ರಾಜೆಕ್ಟ್" ಗಾಗಿ ಕೇಂದ್ರ ಸರ್ಕಾರ ಎಷ್ಟು ಅನುದಾನವನ್ನು ಮೀಸಲಿರಿಸಿದೆ?

ಅ) ರೂ. 5000 ಕೋಟಿ

ಆ) ರೂ. 10000 ಕೋಟಿ

ಇ) ರೂ. 15000 ಕೋಟಿ

ಈ) ರೂ. 20000 ಕೋಟಿ

www.karunaduexams.com

ರೂ. 10000 ಕೋಟಿ

ಗ್ರಾಮೀಣ ಭಾರತದಲ್ಲಿ ಡಿಜಿಟಲ್ ವ್ಯವಹಾರವನ್ನು ಪ್ರೋತ್ಸಾಹಿಸುವ ಸಲುವಾಗಿ “ಭಾರತ್ ನೆಟ್ ಪ್ರಾಜೆಕ್ಟ್” ಗಾಗಿ ಕೇಂದ್ರ ಸರ್ಕಾರ 2017-18 ನೇ ಸಾಲಿನ ಆಯವ್ಯಯದಲ್ಲಿ ರೂ. 10000 ಕೋಟಿ ಅನುದಾನವನ್ನು ಮೀಸಲಿರಿಸಿದೆ. ಈ ಯೋಜನೆಯಡಿ ಸುಮಾರು 150000 ಗ್ರಾಮ ಪಂಚಾಯಿತಿಗಳಲ್ಲಿ ಅತೀ ವೇಗದ ವೈ-ಫೈ ಹಾಟ್ ಸ್ಪಾಟ್ ಗಳ ಸಂಪರ್ಕವನ್ನು ಅತ್ಯಂತ ಕನಿಷ್ಠ ದರದಲ್ಲಿ ಕಲ್ಪಿಸಲಾಗುವುದು. ಇದಲ್ಲದೆ ಗ್ರಾಮಾಂತರ ಪ್ರದೇಶದಲ್ಲಿ ಟೆಲಿ ಮೆಡಿಸಿನ್, ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ನೀಡುವ ಸಲುವಾಗಿ “ಡಿಜಿಗಾವ್” ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

13. “ಹೆಲ್ಲೆನಿಕ್ ರಿಪಬ್ಲಿಕ್ (Hellenic Republic)”ಈ ಕೆಳಗಿನ ಯಾವ ದೇಶದ ಅಧಿಕೃತ ಹೆಸರಾಗಿದೆ?

ಅ) ಗ್ರೀಸ್

ಆ) ಸಿಂಗಪುರ

ಇ) ಮೆಕ್ಸಿಕೊ

ಈ) ಇಟಲಿ

ಗ್ರೀಸ್

“ಹೆಲ್ಲೆನಿಕ್ ರಿಪಬ್ಲಿಕ್ (Hellenic Republic)”ಗ್ರೀಸ್ ದೇಶದ ಅಧಿಕೃತ ಹೆಸರು.

14. ಕುಷ್ಠರೋಗ ಮುಕ್ತ ದಿನಾಚರಣೆ-2017 ರ ಅಂಗವಾಗಿ ಕೇಂದ್ರ ಸರ್ಕಾರ ಕುಷ್ಠರೋಗದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ಈ ಕೆಳಕಂಡ ಯಾವ ಅಭಿಯಾನವನ್ನು ಪ್ರಾರಂಭಿಸಿತು?

ಅ) ಸ್ಪರ್ಶ ಅಭಿಯಾನ

ಆ) ನಿವಾರಣಾ ಅಭಿಯಾನ

ಇ) ಸಂದೇಶ ಅಭಿಯಾನ

ಈ) ಸ್ವಚ್ಛ ಅಭಿಯಾನ

ಸ್ಪರ್ಶ ಅಭಿಯಾನ

ಕುಷ್ಠರೋಗ ಮುಕ್ತ ದಿನಾಚರಣೆ ಅಂಗವಾಗಿ ಜನವರಿ 30, 2017 ರಂದು ರಾಷ್ಟ್ರಾದ್ಯಂತ “ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನ”ವನ್ನು ಕೇಂದ್ರ ಸರ್ಕಾರ ಪ್ರಾರಂಭಿಸಿತು. ಮಹಾತ್ಮ ಗಾಂಧಿ ರವರು ಹುತಾತ್ಮರಾದ ದಿನದ ನೆನಪಿಗಾಗಿ

www.karunaduexams.com

ಮತ್ತು ಕುಷ್ಠರೋಗಿಗಳ ಬಗ್ಗೆ ಗಾಂಧಿಯವರಿಗಿದ್ದ ಕಾಳಜಿ ಮತ್ತು ನಿಸ್ವಾರ್ಥತೆ ನೆನಪಿಗೋಸ್ಕರ ಪ್ರತಿವರ್ಷ ಜನವರಿ 30 ರಂದು ಈ ದಿನವನ್ನು ಆಚರಿಸಲಾಗುತ್ತಿದೆ. ಸಮುದಾಯದ ಸಹಭಾಗಿತ್ವದಲ್ಲಿ ಕುಷ್ಠರೋಗ ಪೀಡಿತರನ್ನು ಪ್ರಾರಂಭಿಕ ಹಂತದಲ್ಲೇ ಗುರುತಿಸಿ, ಸೂಕ್ತ ಚಿಕಿತ್ಸೆಯನ್ನು ನೀಡುವುದು ಸದರಿ ಅಭಿಯಾನದ ಮುಖ್ಯ ಧ್ಯೇಯವಾಗಿದೆ. ಕುಷ್ಠರೋಗ ಮೈಕ್ರೋ ಬ್ಯಾಕ್ಟೀರಿಯಂ ಲೆಪ್ರೆ ಎಂಬ ಬ್ಯಾಕ್ಟೀರಿಯಾದಿಂದ ಬರುವ ಖಾಯಿಲೆಯಾಗಿದ್ದು, ನರವ್ಯೂಹ ಮತ್ತು ಚರ್ಮದ ಮೇಲೆ ಪರಿಣಾಮ ಬೀರುತ್ತದೆ. ವಿಶ್ವ ಕುಷ್ಠರೋಗ ದಿನಾಚರಣೆಯನ್ನು ಪ್ರತಿ ವರ್ಷ ಜನವರಿ ಕೊನೆ ಭಾನುವಾರದಂದು ಆಚರಿಸುವುದು ವಾಡಿಕೆ.

15. ಫಿಲಿಫೈನ್ಸ್ ನಲ್ಲಿ ಜರುಗಿದ "ಭುವನ ಸುಂದರಿ 2016" ರ ಸೌಂದರ್ಯ ಸ್ಪರ್ಧೆಯಲ್ಲಿ ಭುವನ ಸುಂದರಿ ಕಿರೀಟವನ್ನು ಮುಡಿಗೇರಿಸುಕೊಂಡವರು ಯಾರು?

    ಅ) ಆರತಿ ಸಿಯೋಡಿಯಾ

    ಆ) ಐರಿಸ್ ಮಿಟ್ಟೇನೇರ್

    ಇ) ಎಲಿನಾ

    ಈ) ಮಿಸ್ಟೋ ಕಿಯಾಸ್ಕಿ

    ಐರಿಸ್ ಮಿಟ್ಟೇನೇರ್

    ಫಿಲಿಫೈನ್ಸ್ ದೇಶದ ಮೆಟ್ರೋ ಮನಿಲಾದ ಮಾಲ್ ಆಫ್ ಏಷಿಯಾ ಅರೆನಾದಲ್ಲಿ ನಡೆದ ಭುವನ ಸುಂದರಿ 2016" ರ ಸೌಂದರ್ಯ ಸ್ಪರ್ಧೆಯಲ್ಲಿ ಫ್ರಾನ್ಸ್ ದೇಶದ ದಂತ ವೈದ್ಯಕೀಯ ವಿದ್ಯಾರ್ಥಿ ಐರಿಸ್ ಮೆಟ್ಟೇನೇರ್ ಭುವನ ಸುಂದರಿ ಕಿರೀಟವನ್ನು ಮುಡಿಗೇರಿಸುಕೊಂಡರು.)

www.karunaduexams.com

16. ಆಫ್ರಿಕನ್ ಒಕ್ಕೂಟ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದ ವ್ಯಕ್ತಿ ಯಾರು?

    ಅ) ಮಸ್ಸಕಾರ

    ಆ) ನೀಲ್ ಜಾನ್ಸನ್

    ಇ) ಮೌಸಾ ಫಕಿ

ಈ) ಕೊಸಾಜಾನ ಸೂಮಾ

ಮೌಸಾ ಫಕಿ

ಚಾಡ್ ದೇಶದ ಮಾಜಿ ಪ್ರಧಾನ ಮಂತ್ರಿ ಮೌಸಾ ಫಕಿ ಮಹಮತ್ ಆಫ್ರಿಕನ್ ಒಕ್ಕೂಟ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಆಫ್ರಿಕನ್ ಒಕ್ಕೂಟ ಸಮಿತಿಯು ಆಫ್ರಿಕ ದೇಶಗಳ ಆಡಳಿತ ಕೇಂದ್ರ / ಸಚಿವಾಲಯವಾಗಿ ಕಾರ್ಯನಿರ್ವಹಿಸುತ್ತದೆ. ಆಫ್ರಿಕನ್ ಒಕ್ಕೂಟ ಸಮಿತಿಯ ಕೇಂದ್ರಾಡಳಿತ ಕಚೇರಿ ಇಥೋಪಿಯಾದ ಅಡ್ಡೀಸ್ ಅಬಾಬದಲ್ಲಿದೆ.

17. ಭಾರತೀಯ ಆರ್ಥಿಕ ಸಮೀಕ್ಷೆ 2017 ರಲ್ಲಿ, ಆರ್ಥಿಕ ವರ್ಷ 2018 ರಲ್ಲಿ ಭಾರತದ ಜಿಡಿಪಿ ಯು ಎಷ್ಟಿರಲಿದೆ ಎಂದು ಅಂದಾಜಿಸಲಾಗಿದೆ?

ಅ) 6.55% ರಿಂದ 7.25%

ಆ) 6.75% ರಿಂದ 7.5%

ಇ) 7% ರಿಂದ 7.75%

ಈ)7.15% ರಿಂದ 7.75%

6.75% ರಿಂದ 7.5%

2017-18 ನೇ ಸಾಲಿನ ಬಜೆಟ್ ಮಂಡನೆಗೆ ಪೂರ್ವಭಾವಿಯಾಗಿ ವಿತ್ತ ಸಚಿವ ಅರುಣ್ ಜೇಟ್ಲಿ ಸಂಸತ್ ನಲ್ಲಿ ಆರ್ಥಿಕ ಸಮೀಕ್ಷೆಯನ್ನು ಮಂಡಿಸಿದ್ದು, ಶೇ.6.75-7.5 ದರದಲ್ಲಿ ಜಿಡಿಪಿ ಬೆಳವಣಿಗೆ ನಿರೀಕ್ಷೆ ಇದೆ ಎಂದಿದ್ದಾರೆ.

18. ಭಾರತೀಯ ಕ್ರಿಕೆಟ್ ನಿಯಂತ್ರಣ ಸಂಸ್ಥೆಯ (BCCI) ನೂತನ ಮುಖ್ಯಸ್ಥರಾಗಿ ಯಾರನ್ನು ನೇಮಿಸಲಾಗಿದೆ?

ಅ) ಅನುರಾಗ್ ಠಾಕೂರ್

ಆ) ಸೌರವ್ ಗಂಗೂಲಿ

ಇ) ಮನೋಜ್ ಶರ್ಮಾ

ಈ) ವಿನೋದ್ ರಾಯ್

www.karunaduexams.com

ವಿನೋದ್ ರಾಯ್

ಭಾರತೀಯ ಸರ್ವೋಚ್ಛ ನ್ಯಾಯಾಲಯವು ಭಾರತದ ಮಾಜಿ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ವಿನೋದ್ ರಾಯ್ ರವರನ್ನು ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಸಂಸ್ಥೆಯಾದ ಭಾರತೀಯ ಕ್ರಿಕೆಟ್ ನಿಯಂತ್ರಣ ಸಂಸ್ಥೆಯ (BCCI) ನೂತನ ಮುಖ್ಯಸ್ಥರಾಗಿ ನೇಮಿಸಿದೆ. ನಾಲ್ಕು ಸದಸ್ಯರ ಸಮಿತಿಯಲ್ಲಿ ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಡಯಾನ ಎದುಲ್ಜಿ, ಇತಿಹಾಸಕಾರ ರಾಮಚಂದ್ರ ಗುಹಾ, ಐ.ಡಿ.ಎಫ್.ಸಿ. ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಕ್ರಮ್ ಲಮಾಯೆ ಹಾಗೂ ಬಿಸಿಸಿಐನ ಅಮಿತಾಭ್ ಚೌದರಿ ಪ್ರತಿನಿಧಿಸಲಿದ್ದಾರೆ.

19. ಭಾರತದ ಅತಿ ದೊಡ್ಡ 'ನವ್ಯೋದ್ಯಮ ವಿಕಸನ ತಾಣ' (Start-up Incubator) ಯಾವ ರಾಜ್ಯದಲ್ಲಿ ಕಾರ್ಯಾರಂಭ ಮಾಡಲಿದೆ?

ಅ) ಆಂಧ್ರ ಪ್ರದೇಶ

ಆ) ಕರ್ನಾಟಕ

ಇ) ಮಹಾರಾಷ್ಟ್ರ

ಈ) ಪಶ್ಚಿಮ ಬಂಗಾಳ

ಕರ್ನಾಟಕ

ಇಂಡೋ-ಅಮೆರಿಕಾದ ಉದ್ಯಮಿ ಹಾಗೂ ಬಂಡವಾಳ ವ್ಯವಸ್ಥೆದಾರರಾದ ಶ್ರೀ ಗುರುರಾಜ್ ದೇಶಪಾಂಡೆ ಭಾರತದ ಅತಿ ದೊಡ್ಡ 'ನವ್ಯೋದ್ಯಮ ವಿಕಸನ ತಾಣ' (Start-up Incubator) ವನ್ನು ಕರ್ನಾಟಕದ ಹುಬ್ಬಳ್ಳಿಯಲ್ಲಿ ಪ್ರಾರಂಭಿಸಲಿದ್ದಾರೆ. ಈ ಯೋಜನೆಯಡಿ ಸ್ಥಳೀಯ ಉದ್ಯಮ ಸಮಸ್ಯಗಳನ್ನು ಗುರುತಿಸಿ ಅದಕ್ಕೆ ಪರಿಹಾರ ಮಾರ್ಗಗಳನ್ನು ಸೂಚಿಸಿ ನವ್ಯೋದ್ಯಮವನ್ನು ಉತ್ತೇಜಿಸುವುದು ಮೂಲ ಉದ್ದೇಶವಾಗಿದೆ. ಈ ತಾಣ ಸೆಪ್ಟಂಬರ್ 2017 ರಲ್ಲಿ ಕಾರ್ಯಾರಂಭ ಮಾಡಲಿದ್ದು ಸರಿಸುಮಾರು 200 ನವ್ಯೋದ್ಯಮಗಳಿಗೆ ಸ್ಥಳಾವಕಾಶ ಕಲ್ಪಿಸಲಿದೆ.

20. ಪ್ರವಾಸೋದ್ಯಮದಲ್ಲಿ ಹೋಮ್ ಸ್ಟೇ ಯೋಜನೆಯನ್ನು ಪ್ರೋತ್ಸಾಹಿಸುವ ಸಲುವಾಗಿ, ಅಂತರ್ಜಾಲ ಪ್ರವಾಸಿ ಕಂಪನಿ 'ಮೇಕ್ ಮೈ ಟ್ರಿಪ್' ನೊಂದಿಗೆ ಯಾವ ರಾಜ್ಯದ ಪ್ರವಾಸೋದ್ಯಮ ಇಲಾಖೆ ಒಪ್ಪಂದ ಮಾಡಿಕೊಂಡಿದೆ?

ಅ) ಮಧ್ಯಪ್ರದೇಶ

ಆ) ಕರ್ನಾಟಕ

ಇ) ಕೇರಳ

www.karunaduexams.com

ಈ) ಅಸ್ಸಾಂ

ಮಧ್ಯಪ್ರದೇಶ

21. ಭಾರತದಲ್ಲಿ ನೋಟ್ ಅಮಾನ್ಯೀಕರಣದ ನಂತರದ ಅಕ್ರಮ ಹಣ ಜಮಾವಣೆಯನ್ನು ಕಂಡುಹಿಡಿಯುವ ಸಲುವಾಗಿ ವೃತ್ತಿ ತೆರಿಗೆ ಇಲಾಖೆಯು ಯಾವ ಕಾರ್ಯಚರಣೆಯನ್ನು ಪ್ರಾರಂಭಿಸಿದೆ?

ಅ) ಆಪರೇಷನ್ ಟ್ರಾಕ್ ಮನಿ

ಆ) ಆಪರೇಷನ್ ಬ್ಲಾಕ್ ಮನಿ

ಇ) ಆಪರೇಷನ್ ಕ್ಲೀನ್ ಮನಿ

ಈ) ಆಪರೇಷನ್ ಕ್ಲೌಡ್ ಮನಿ

ಆಪರೇಷನ್ ಕ್ಲೀನ್ ಮನಿ

ವೃತ್ತಿ ತೆರಿಗೆ ಇಲಾಖೆಯು ಭಾರತದಲ್ಲಿ ನೋಟ್ ಅಮಾನ್ಯೀಕರಣದ ನಂತರದ ಅಕ್ರಮ ಹಣ ಜಮಾವಣೆಯನ್ನು ಕಂಡುಹಿಡಿಯುವ ಸಲುವಾಗಿ, ಅಂದರೆ ನವಂಬರ್ 9 ರಿಂದ ಡಿಸಂಬರ್ 30 ರವರೆಗಿನ ದೊಡ್ಡ ಮೊತ್ತದ ಬ್ಯಾಂಕ್ ಜಮೆಯನ್ನು ಪರೀಕ್ಷಿಸುವ ಸಲುವಾಗಿ 'ಆಪರೇಷನ್ ಕ್ಲೀನ್ ಮನಿ' ಕಾರ್ಯಚರಣೆಯನ್ನು ಪ್ರಾರಂಭಿಸಿದೆ. ಮೊದಲ ಹಂತದಲ್ಲಿ ಸುಮಾರು 18 ಲಕ್ಷ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಿದ್ದಾರೆ.

22. ರಾಜೀವ್ ಗಾಂಧಿ ರಾಷ್ಟ್ರೀಯ ವಿಮಾನಯಾನ ವಿಶ್ವವಿದ್ಯಾನಿಲಯ (RGNAU) ಯಾವ ರಾಜ್ಯದಲ್ಲಿದೆ?

ಅ) ಮಹಾರಾಷ್ಟ್ರ

ಆ) ಉತ್ತರ ಪ್ರದೇಶ

ಇ) ತೆಲಂಗಾಣ

ಈ) ಕೇರಳ

ಉತ್ತರಪ್ರದೇಶ

www.karunaduexams.com

23. ಸೇಂಟ್ ಪೀಟರ್ಸ್ ಬರ್ಗ್ ಅಂತರರಾಷ್ಟ್ರೀಯ ಆರ್ಥಿಕ ವಿಚಾರ ವೇದಿಕೆ 2017 ರಲ್ಲಿ ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಲಿರುವ ಭಾರತೀಯ ವ್ಯಕ್ತಿ ಯಾರು?

ಅ) ಸುಷ್ಮಾ ಸ್ವರಾಜ್

ಆ) ಪ್ರಣಬ್ ಮುಖರ್ಜಿ

ಇ) ನರೇಂದ್ರ ಮೋದಿ

ಈ) ಮುರಳಿಮೋಹನ್ ದಾಸ್

ನರೇಂದ್ರ ಮೋದಿ

ಸೇಂಟ್ ಪೀಟರ್ಸ್ ಬರ್ಗ್ ಅಂತರರಾಷ್ಟ್ರೀಯ ಆರ್ಥಿಕ ವಿಚಾರ ವೇದಿಕೆ 2017 ನ ಗೌರವಾನ್ವಿತ ಅತಿಥಿ ರಾಷ್ಟ್ರವಾಗಿ ಭಾರತವನ್ನು ಆಹ್ವಾನಿಸಲಾಗಿದೆ. ರಷ್ಯಾದ ಸೆಂಟ್ ಪೀಟರ್ಸ್ ಬರ್ಗ್ ನಲ್ಲಿ ಜೂನ್ 1 ರಿಂದ 3, 2017 ರವರೆಗೆ ಈ ಕಾರ್ಯಕ್ರಮ ನಡೆಯಲಿದ್ದು, ಪ್ರಧಾನಿ ಮೋದಿ ಅವರು ಅತಿಥಿಯಾಗಿ ಭಾಗವಹಿಸಲಿದ್ದಾರೆ.

24. "2017-ವಿಶ್ವ ತೇವಭೂಮಿ ದಿನ (Worlds Wetland Day)"ದ ಧ್ಯೇಯವಾಕ್ಯ ___________?

ಅ) Wetlands for Better Future

ಆ) Wetlands for Disaster Risk Reduction

ಇ) Wetlands for Disaster Free Nature

ಈ) Wetlands for Sustainable World

Wetlands for Disaster Risk Reduction

ವಿಶ್ವ ತೇವಭೂಮಿ ದಿನವನ್ನು ಪ್ರತಿವರ್ಷ ಫೆಬ್ರವರಿ 2 ರಂದು ಆಚರಿಸಲಾಗುತ್ತದೆ. ತೇವಭೂಮಿ ಸಂರಕ್ಷಣೆ ಒಪ್ಪಂದವನ್ನು ಫೆಬ್ರವರಿ 2, 1971 ರಲ್ಲಿ ಇರಾನಿನ ರಾಮಸರ್ ನಗರದಲ್ಲಿ ಅಳವಡಿಸಿಕೊಂಡರ ಸ್ಮರಣಾರ್ಥ ಈ ದಿನದಂದು ವಿಶ್ವ ತೇವಭೂಮಿ ದಿನವನ್ನು ಆಚರಿಸಲಾಗುತ್ತದೆ. 2017 ವಿಶ್ವ ತೇವಭೂಮಿ ದಿನವನ್ನು ಈ ಬಾರಿ ಮಧ್ಯ ಪ್ರದೇಶ ಸರ್ಕಾರದ ಸಹಯೋಗದೊಂದಿಗೆ ಭೋಜ್ ತೇವಭೂಮಿ ಪ್ರದೇಶದಲ್ಲಿ ಆಚರಿಸಲಾಗುತ್ತಿದೆ. ಭೋಜ್ ತೇವಭೂಮಿ ಪ್ರದೇಶ ಭಾರತದ 26 ರಾಮಸರ್ ತೇವಭೂಮಿ ಪ್ರದೇಶಗಳಲ್ಲಿ ಒಂದಾಗಿದೆ. Wetlands for Disaster Risk Reduction ಇದು ಈ ವರ್ಷದ ಧ್ಯೇಯವಾಕ್ಯ.

www.karunaduexams.com

25. ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ನ ನೂತನ ಸಿಇಓ ಹಾಗೂ ಎಂಡಿ ಯಾಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ವಿಕ್ರಂ ಲಿಮಯೆ

ಆ) ವಿನೋದ್ ರೈ

ಇ) ಅಮಿತಾಭ ಚೌಧರಿ

ಈ) ಅರವಿಂದ್ ಭಟ್

ವಿಕ್ರಂ ಲಿಮಯೆ

ಐಡಿಎಫ್ ಸಿ ಬ್ಯಾಂಕಿನ ಸಿಇಓ ಆಗಿರುವ ವಿಕ್ರಂ ಲಿಮೆಯೆ ಅವರು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ನ ನೂತನ ಸಿಇಓ ಹಾಗೂ ಎಂಡಿ ಯಾಗಿ ನೇಮಕಗೊಂಡಿದ್ದಾರೆ. ಚಿತ್ರಾ ರಾಮಕೃಷ್ಣ ಅವರು ದಿಡೀರ್ ರಾಜೀನಾಮೆ ನೀಡಿದ ಕಾರಣ ಈ ಸ್ಥಾನ ತೆರವಾಗಿತ್ತು.

26. "ಭಾರತೀಯ ಕರಾವಳಿ ತೀರಾ ಪಡೆ ದಿನ (Indian Coast Guard Day)" ________ ರಂದು ಆಚರಿಸಲಾಗುತ್ತದೆ?

ಅ) ಜನವರಿ 15

ಆ) ಫೆಬ್ರವರಿ 1

ಇ) ಫೆಬ್ರವರಿ 2

ಈ) ಮಾರ್ಚ್ 2

ಫೆಬ್ರವರಿ 1

ಭಾರತೀಯ ಕರಾವಳಿ ತೀರಾ ಪಡೆ ದಿನವನ್ನು ಪ್ರತಿ ವರ್ಷ ಫೆಬ್ರವರಿ 1 ರಂದು ಆಚರಿಸಲಾಗುತ್ತದೆ. ಕರಾವಳಿ ತೀರಾ ಪಡೆಯನ್ನು ಫೆಬ್ರವರಿ 1, 1977 ರಂದು ಸ್ಥಾಪಿಸಲಾಯಿತು. ಅದರ ಸ್ಮರಣಾರ್ಥ ಫೆಬ್ರವರಿ 1 ರಂದು ಕರಾವಳಿ ತೀರಾ ಪಡೆ ದಿನವನ್ನು ಆಚರಿಸಲಾಗುತ್ತಿದೆ.

www.karunaduexams.com

27. ಭಾರತೀಯ ಸೇನೆಯ ನೂತನ “ಎಂಜನಿಯರ್-ಇನ್-ಚೀಫ್” ಆಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ಸುರೇಶ್ ಶರ್ಮಾ

ಆ) ಅನುಪ್ ಭಂಡಾರಿ

ಇ) ಉದಯ್ ಮೆಹ್ತಾ

ಈ) ಸಚಿನ್ ಸಿಂಗ್

ಸುರೇಶ್ ಶರ್ಮಾ

ಲೆಫ್ಟಿನೆಂಟ್ ಜನರಲ್ ಸುರೇಶ್ ಶರ್ಮಾ ಅವರು ಭಾರತೀಯ ಸೇನೆಯ ನೂತನ “ಎಂಜನಿಯರ್-ಇನ್-ಚೀಫ್” ಆಗಿ ನೇಮಕಗೊಂಡಿದ್ದಾರೆ. ಸೇನೆಯ ಎಂಜನಿಯರ್ ಸೇವೆಗಳಿಗೆ ಸಂಬಂಧಿಸಿದಂತೆ ಭೂ ಸೇನೆ, ವಾಯು ಸೇನೆ ಹಾಗೂ ನೌಕ ಸೇನೆ ಮುಖ್ಯಸ್ಥರಿಗೆ ಸಲಹೆಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ.

28. ಇತ್ತೀಚೆಗೆ ಯಾವ ರಾಜ್ಯ ಶಾಲಾ ಪರೀಕ್ಷೆಗಳಲ್ಲಿ ತೃತೀಯ ಲಿಂಗಿ ವಿಭಾಗವನ್ನು ಪರಿಚಯಿಸಿದೆ?

ಅ) ಬಿಹಾರ

ಆ) ರಾಜಸ್ತಾನ

ಇ) ಕೇರಳ

ಈ) ಮಹಾರಾಷ್ಟ್ರ

ಬಿಹಾರ

ಬಿಹಾರ ರಾಜ್ಯ ಸರ್ಕಾರ ಶಾಲಾ ಪರೀಕ್ಷೆಗಳಲ್ಲಿ ತೃತೀಯ ಲಿಂಗಿ ವಿಭಾಗವನ್ನು ಪರಿಚಯಿಸಿದೆ. 2014 ರಲ್ಲಿ ಸುಪ್ರೀಂ ಕೋರ್ಟ್ ಮಂಗಳಮುಖಿಯನ್ನು ತೃತೀಯ ಲಿಂಗಿಗಳೆಂದು ಪರಿಗಣಿಸುವಂತೆ ನೀಡಿದ ಆದೇಶದ ಅನ್ವಯ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.

29. ಭಾರತದ “ಲಕ್ಷ್ಯ ಸೇನ್ (Lakshya Sen)” ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಕ್ರಿಕೆಟ್

ಆ) ಬ್ಯಾಡ್ಮಿಂಟನ್

ಇ) ಟೆನ್ನಿಸ್

www.karunaduexams.com

ಈ) ಗಾಲ್ಫ್

ಬ್ಯಾಡ್ಮಿಂಟನ್

ಲಕ್ಷ್ಯ ಸೇನ್ ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ಆಟಗಾರ. ಇತ್ತೀಚೆಗೆ ಬಿಡುಗಡೆಗೊಂಡ ಬ್ಯಾಡ್ಮಿಂಟನ್ ವರ್ಲ್ಡ್ ಫೆಡರೇಷನ್ ಶ್ರೇಯಾಂಕದಲ್ಲಿ ಸೇನ್ ವಿಶ್ವದ ನಂ.1 ಜೂನಿಯನ್ ಬ್ಯಾಡ್ಮಿಂಟನ್ ಆಟಗಾರರಾಗಿ ಹೊರಹೊಮ್ಮಿದ್ದಾರೆ.

30. ವಿಶ್ವ ಕ್ಯಾನ್ಸರ್ ದಿನ ________________?

ಅ) ಫೆಬ್ರವರಿ 1

ಆ) ಫೆಬ್ರವರಿ 2

ಇ) ಫೆಬ್ರವರಿ 3

ಈ) ಫೆಬ್ರವರಿ 4

ಫೆಬ್ರವರಿ 4

ಪ್ರತಿ ವರ್ಷ ಫೆಬ್ರವರಿ 4 ರಂದು ವಿಶ್ವ ಕ್ಯಾನ್ಸರ್ ದಿನವನ್ನು ಆಚರಿಸಲಾಗುತ್ತದೆ. “ವಿ ಕೆನ್ ಐ ಕೆನ್” ಇದು ಈ ವರ್ಷ ಕ್ಯಾನ್ಸರ್ ದಿನದ ಧ್ಯೇಯವಾಕ್ಯ.

31. ಯಾವ ರಾಜ್ಯ ಸರ್ಕಾರಿ ನೌಕರಿಯಲ್ಲಿ ಕ್ರೀಡಾಪಟುಗಳಿಗೆ ಶೇ 2% ಮೀಸಲಾತಿಯನ್ನು ನೀಡಲಿದೆ?

ಅ) ಬಿಹಾರ

ಆ) ಜಾರ್ಖಂಡ್

ಇ) ಪಶ್ಚಿಮ ಬಂಗಾಳ

ಈ) ಹಿಮಾಚಲ ಪ್ರದೇಶ

ಜಾರ್ಖಂಡ್

ಜಾರ್ಖಂಡ್ ಸರ್ಕಾರ ಕ್ರೀಡಾಪಟುಗಳಿಗೆ ಸರ್ಕಾರಿ ನೌಕರಿಯಲ್ಲಿ ಶೇ 2% ಮೀಸಲಾತಿಯನ್ನು ಘೋಷಿಸಿದೆ. ಅಲ್ಲದೇ ಕ್ರೀಡಾಪಟುಗಳಿಗೆ ಪೌಷ್ಠಿಕ ಆಹಾರವನ್ನು ಸಹ ನೀಡುವುದಾಗಿ ಜಾರ್ಖಂಡ್ ಮುಖ್ಯಮಂತ್ರಿ ರಘುಬರ್ ದಾಸ್ ಹೇಳಿದ್ದಾರೆ.

www.karunaduexams.com

32. “ಏಷ್ಯಾ ಸ್ಕ್ವಾಷ್ ಫೆಡರೇಷನ್ (Asia Squash Federation)”ನ ಉಪಾಧ್ಯಕ್ಷರಿಗೆ ಆಯ್ಕೆಯಾದ ಭಾರತೀಯ ಯಾರು?

ಅ) ದೆಬೇಂದ್ರನಾಥ್ ಸಾರಂಗಿ

ಆ) ಎನ್ ರಾಮಚಂದ್ರನ್

ಇ) ಸತ್ಯನಾರಾಯಣ್ ಘೋಷ್

ಈ) ಸಿದ್ದಾರ್ಥ್ ಮಲ್ಹೋತ್ರ

ದೆಬೇಂದ್ರನಾಥ್ ಸಾರಂಗಿ

ಸ್ಕ್ವಾಷ್ ಫೆಡರೇಷನ್ ಆಫ್ ಇಂಡಿಯಾದ ಅಧ್ಯಕ್ಷ ದೆಬೇಂದ್ರನಾಥ್ ಸಾರಂಗಿ ರವರು ಏಷ್ಯಾ ಸ್ಕ್ವಾಷ್ ಫೆಡರೇಷನ್ ಉಪಾಧ್ಯಕ್ಷರಿಗೆ ನೇಮಕಗೊಂಡರು. ಆ ಮೂಲಕ ಎನ್ ರಾಮಚಂದ್ರನ್ ನಂತರ ಈ ಹುದ್ದೆಯನ್ನು ಅಲಂಕರಿಸಿದ ಎರಡನೇ ಭಾರತೀಯ ಎಂಬ ಗೌರವಕ್ಕೆ ಪಾತ್ರರಾದರು.

33. ಯಾವ ರಾಜ್ಯ ಸಾರ್ವಜನಿಕ ಆಡಳಿತದಲ್ಲಿ ಉತ್ಕೃಷ್ಟ ಸೇವೆ ನೀಡಿದವರನ್ನು ಗುರುತಿಸಲು “ನಾಗರಿಕ ಸೇವಾ ಪ್ರಶಸ್ತಿ”ಗಳನ್ನು ಪ್ರಾರಂಭಿಸಿದೆ?

ಅ) ಗುಜರಾತ್

ಆ) ರಾಜಸ್ತಾನ

ಇ) ಅರುಣಾಚಲ ಪ್ರದೇಶ

ಈ) ಹರಿಯಾಣ

ಅರುಣಾಚಲ ಪ್ರದೇಶ

ಅರುಣಾಚಲ ಪ್ರದೇಶ ಮುಖ್ಯಮಂತ್ರಿ ಪೆಮಾ ಖಂಡು ಅವರು ಸಾರ್ವಜನಿಕ ಆಡಳಿತದಲ್ಲಿ ಉತ್ಕೃಷ್ಟ ಸೇವೆ ನೀಡಿದವರಿಗೆ “ಅರುಣಾಚಲ ನಾಗರಿಕ ಸೇವಾ ಪ್ರಶಸ್ತಿಯನ್ನು” ಸ್ಥಾಪಿಸಿದ್ದಾರೆ. ಕಠಿಣ ಶ್ರಮ ಹಾಗೂ ನಾವೀನ್ಯತೆಯನ್ನು ತೋರಿದ ಸರ್ಕಾರಿ ನೌಕರರನ್ನು ಗುರುತಿಸುವ ಮೂಲಕ ನೈತಿಕತೆಯನ್ನು ಹೆಚ್ಚಿಸುವುದಲ್ಲದೆ, ಉತ್ಪಾದಕ ಕಾರ್ಯ ಸಂಸ್ಕೃತಿಯನ್ನು ರೂಪಿಸಲು ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. ಪ್ರಶಸ್ತಿಯು ಫಲಕ, ಪದಕ ಹಾಗೂ ವ್ಯಕ್ತಿಗತ ರೂ 1ಲಕ್ಷ ನಗದು, ಸಂಸ್ಥೆಗಳಿಗೆ ರೂ 5ಲಕ್ಷ ನಗದನ್ನು ಒಳಗೊಂಡಿದೆ.

www.karunaduexams.com

34. 2016 ರಾಷ್ಟ್ರೀಯ ವಾಣಿಜ್ಯೋದ್ಯಮ ಪ್ರಶಸ್ತಿಗಳಲ್ಲಿ “ಅತ್ಯುತ್ತಮ ಐಟಿ ಸ್ಟಾರ್ಟ್ ಆಪ್” ಪ್ರಶಸ್ತಿಯನ್ನು ಪಡೆದುಕೊಂಡ ಸ್ಟಾರ್ಟ್ ಆಪ್ ಯಾವುದು?

ಅ) ಲುಸಿಡಿಯಸ್

ಆ) ಮಿತ್ರ ಬಯೊಟೆಕ್

ಇ) ಆಕಾಶ್

ಈ) ಜೀವಂಕುಶ್

ಲುಸಿಡಿಯಸ್

ಐಟಿ ರಿಸ್ಕ್ ವಿಮರ್ಶಿಸುವ ಹಾಗೂ ಡಿಜಿಟಲ್ ಭದ್ರತೆ ಸೇವೆಯನ್ನು ಒದಗಿಸುವ “ಲುಸಿಡಿಯಸ್” ಸ್ಟಾರ್ಟ್ ಆಪ್ ಅತ್ಯುತ್ತಮ ಐಟಿ ಸ್ಟಾರ್ಟ್ ಆಪ್ ಪ್ರಶಸ್ತಿಯನ್ನು ಪಡೆದುಕೊಂಡಿತು. ಭಾರತ ಸರ್ಕಾರದ ಆಧಾರ್ ಆಧರಿತ ಪಾವತಿ ವ್ಯವಸ್ಥೆ BHIM ಆ್ಯಪ್ ಗೆ ಲುಸಿಡಿಯಸ್ ಭದ್ರತೆಯನ್ನು ಒದಗಿಸುತ್ತಿದೆ.

35. ಸಬ್ಸಿಡಿಗೆ ಸಂಬಂಧಿಸಿದಂತೆ ಹಜ್ ನಿಯಮವನ್ನು ಸುಧಾರಿಸಲು ಕೇಂದ್ರ ಸರ್ಕಾರ ಯಾವ ಸಮಿತಿಯನ್ನು ರಚಿಸಿದೆ?

ಅ) ಅಫ್ಜಲ್ ಅಮಾನುಲ್ಲಾ ಸಮಿತಿ

ಆ) ಶೇಖರ್ ಬಸು ಸಮಿತಿ

ಇ) ರಾಜವರ್ಧನ್ ಸಿಂಗ್ ಸಮಿತಿ

ಈ) ಸೈಯದ್ ಅನ್ವರ್ ಸಮಿತಿ

ಅಫ್ಜಲ್ ಅಮಾನುಲ್ಲಾ ಸಮಿತಿ

ಭಾರತದ ಹಜ್ ನಿಯಮ ಹಾಗೂ ಸಬ್ಸಿಡಿ ಸಂಬಂಧಿತ ವಿಷಯದ ಬಗ್ಗೆ ಅಧ್ಯಯನ ನಡೆಸುವ ಸಲುವಾಗಿ ಕೇಂದ್ರ ಸರ್ಕಾರ ಆರು ಜನ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಿದೆ. 2022ರ ವೇಳಗೆ ಹಂತ ಹಂತವಾಗಿ ಧಾರ್ಮಿಕ ಯಾತ್ರಾರ್ಥಿಗಳಿಗೆ ನೀಡುವ ಸಬ್ಸಿಡಿಯನ್ನು ಹಂತ ಹಂತವಾಗಿ ರುದ್ದಗೊಳಿಸುವಂತೆ 2012ರಲ್ಲಿ ಸುಪ್ರೀಂಕೋರ್ಟ್ ನೀಡಿರುವ ಆದೇಶದ ಅನುಸಾರ ಸಮಿತಿಯನ್ನ ರಚಿಸಲಾಗಿದೆ. ಜೆಡ್ಡಾದ ಕನ್ಸುಲೇಡ್ ಜನರಲ್ ಆಗಿದ್ದ ಅಫ್ಜಲ್ ಅಮಾನುಲ್ಲಾ ಅವರು ಸಮಿತಿಯ ಅಧ್ಯಕ್ಷರಾಗಿದ್ದಾರೆ.

www.karunaduexams.com

36. ಮೊಟ್ಟ ಮೊದಲ “BIMSTEC” ರಾಷ್ಟ್ರೀಯ ಭದ್ರತಾ ಮುಖ್ಯಸ್ಥರ ಸಭೆಯ ಅತಿಥ್ಯ ವಹಿಸಲಿರುವ ರಾಷ್ಟ್ರ ಯಾವುದು?

ಅ) ಭಾರತ

ಆ) ಥಾಯ್ಲೆಂಡ್

ಇ) ಶ್ರೀಲಂಕಾ

ಈ) ನೇಪಾಳ

ಭಾರತ

ಮೊಟ್ಟ ಮೊದಲ BIMSTEC ರಾಷ್ಟ್ರೀಯ ಭದ್ರತಾ ಮುಖ್ಯಸ್ಥರ ಸಭೆ ಭಾರತದಲ್ಲಿ ಜರುಗಲಿದೆ. ಹೆಚ್ಚುತ್ತಿರುವ ಭಯೋತ್ಪಾದನೆ ಹಾಗೂ ಹಿಂಸಾಚಾರದ ವಿರುದ್ದ ಸೂಕ್ತ ಕ್ರಮಗಳನ್ನು ಜಾರಿಗೆ ತರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು.

37. “ಇಂಡಿಯಾ-2017” ಮತ್ತು “ಭಾರತ್ 2017” ಪುಸ್ತಕವನ್ನು ಬಿಡುಗಡೆಗೊಳಿಸದ ಸಚಿವಾಲಯ _________?

ಅ) ಕೇಂದ್ರ ಮಾಹಿತಿ ಮತ್ತು ಪ್ರಸರಣ ಸಚಿವಾಲಯ

ಆ) ಕೇಂದ್ರ ಗೃಹ ಸಚಿವಾಲಯ

ಇ) ಕೇಂದ್ರ ಪ್ರವಾಸೋದ್ಯಮ ಸಚಿವಾಲಯ

ಈ) ಕೇಂದ್ರ ವಿದೇಶಾಂಗ ವ್ಯವಹಾರ ಸಚಿವಾಲಯ

ಕೇಂದ್ರ ಮಾಹಿತಿ ಮತ್ತು ಪ್ರಸರಣ ಸಚಿವಾಲಯ

ಕೇಂದ್ರ ಮಾಹಿತಿ ಹಾಗೂ ಪ್ರಸರಣ ಖಾತೆ ಸಚಿವ ವೆಂಕಯ್ಯ ನಾಯ್ಡು ಅವರು “ಇಂಡಿಯಾ-2017” ಮತ್ತು “ಭಾರತ್ 2017” ಪುಸ್ತಕವನ್ನು ಬಿಡುಗಡೆಗೊಳಿಸಿದರು. ದೇಶ, ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಮಗ್ರ ಮಾಹಿತಿ ಸೇರಿದಂತೆ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಮಾಹಿತಿಯನ್ನು ಪುಸ್ತಕಗಳು ಒಳಗೊಂಡಿವೆ.

38. ವಿಮಾನಯಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ BCAS ಎಂದರೆ ____________?

ಅ) ಬ್ಯೂರೋ ಆಫ್ ಕಸ್ಟಮ್ ಅವಿಯೇಷನ್ ಸೆಕ್ಯೂರಿಟಿ

ಆ) ಬ್ಯೂರೋ ಆಫ್ ಸಿವಿಲ್ ಅವಿಯೇಷನ್ ಸೆಕ್ಯೂರಿಟಿ

ಇ) ಬ್ಯೂರೋ ಆಫ್ ಸೆನ್ಸಾರ್ ಅವಿಯೇಷನ್ ಸೆಕ್ಯೂರಿಟಿ

www.karunaduexams.com

ಈ) ಬ್ಯೂರೋ ಆಫ್ ಸಿಟಿಜನ್ ಅವಿಯೇಷನ್ ಸೆಕ್ಯೂರಿಟಿ

ಬ್ಯೂರೋ ಆಫ್ ಸಿವಿಲ್ ಅವಿಯೇಷನ್ ಸೆಕ್ಯೂರಿಟಿ

**39.** 2017 ಜೆನೆಸಿಸ್ (Genesis) ಪ್ರಶಸ್ತಿಯನ್ನು ಗೆದ್ದುಕೊಂಡ ಭಾರತೀಯ ಮೂಲದ ಬ್ರಿಟಿಷ್ ಶಿಲ್ಪಿ ಯಾರು?

ಅ) ಅನೀಶ್ ಕಪೂರ್

ಆ) ರಾಜೇಂದ್ರ ಸಿಂಗ್

ಇ) ಅನಿಲ್ ಭಾವೆ

ಈ) ನಿರಂಜನ್ ಯಾದವ್

ಅನೀಶ್ ಕಪೂರ್

ಪ್ರಖ್ಯಾತ ಭಾರತೀಯ ಮೂಲದ ಬ್ರಿಟಿಷ್ ಶಿಲ್ಪಿ ಹಾಗೂ ಸಿರಿಯಾ ನಿರಾಶ್ರಿತರ ಹಕ್ಕುಗಳ ಪ್ರಖರ ಪ್ರತಿಪಾದಕ, ಅನೀಶ್ ಕಪೂರ್ ಅವರು 10 ಲಕ್ಷ ಅಮೆರಿಕನ್ ಡಾಲರ್ಗಳ ಇಸ್ರೇಲಿನ ಪ್ರತಿಷ್ಠಿತ ಜೆನಿಸಿಸ್ ಬಹುಮಾನವನ್ನು ಗೆದ್ದುಕೊಂಡಿದ್ದಾರೆ. ಯಹೂದ್ಯ ಮೌಲ್ಯಗಳಿಗೆ ತೋರಿರುವ ಬದ್ಧತೆಗಾಗಿ ಅನೀಶ್ ಕಪೂರ್ಗೆ ಈ ಬಹುಮಾನ ಸಂದಿದೆ.ಯಹೂದ್ಯ ನೊಬೆಲ್ ಪ್ರಶಸ್ತಿ ಎಂದೇ ಪರಿಗಣಿತವಾಗಿರುವ ಇಸ್ರೇಲ್ನ ಈ ಉನ್ನತ ಬಹುಮಾನಕ್ಕೆ ಭಾಜನರಾಗಿರುವ 62ರ ಹರೆಯದ ಅನೀಶ್ ಕಪೂರ್, ಸಿರಿಯಾ ನಿರಾಶ್ರಿತರ ವಿರುದ್ಧದ ಸರಕಾರಿ ನೀತಿಗಳನ್ನು ತೀವ್ರವಾಗಿ ಖಂಡಿಸಿದರು. ಪ್ರಶಸ್ತಿ ಸಮಿತಿ ಅಧ್ಯಕ್ಷರಾಗಿರುವ ನತನ್ ಶರಾನ್ಸ್ಕಿ ಅವರು ಕಪೂರ್ ಅವರ ಕಲೆಗಾರಿಕೆಗೆ ಭಾರೀ ಪ್ರಶಂಸೆ ವ್ಯಕ್ತಪಡಿಸಿ ಸಮಕಾಲೀನ ನವಶೋಧಕ ಕಲಾವಿದರ ಪಾಲಿಗೆ ಕಪೂರ್ ಅವರು ಅತ್ಯಂತ ಪ್ರಭಾವಶಾಲಿಯಾಗಿದ್ದಾರೆ ಎಂದು ಹೇಳಿದ್ದಾರೆ.

40. "ಬ್ಯಾಂಡ್, ಬಜಾ, ಬಾಯ್ಸ್ (Band, Bajaa, Boys)" ಪುಸ್ತಕದ ಲೇಖಕರು ____________?

ಅ) ಚೇತನ್ ಭಗತ್

ಆ) ರಚನಾ ಸಿಂಗ್

ಇ) ದೆಬುರಾಯ್ ದತ್ತಾ

ಈ) ಪ್ರಮೋದ್ ನಾಯಕ್

ರಚನಾ ಸಿಂಗ್



www.karunaduexams.com

41. “4ನೇ ರೋಲ್ ಬಾಲ್ ವಿಶ್ವಕಪ್-2017” ಯಾವ ದೇಶದಲ್ಲಿ ನಡೆಯಲಿದೆ?

ಅ) ಭಾರತ

ಆ) ಬಾಂಗ್ಲದೇಶ

ಇ) ಶ್ರೀಲಂಕಾ

ಈ) ಪಾಕಿಸ್ತಾನ

ಬಾಂಗ್ಲದೇಶ

4ನೇ ರೋಲ್ ಬಾಲ್ ವಿಶ್ವಕಪ್-2017 ಬಾಂಗ್ಲದೇಶದ ರಾಜಧಾನಿ ಡಾಕಾದಲ್ಲಿ ಫೆಬ್ರವರಿ 17 ರಿಂದ 23 ರವರೆಗೆ ನಡೆಯಲಿದೆ. ಸುಮಾರು 45 ದೇಶಗಳಿಂದ 700ಕ್ಕೂ ಹೆಚ್ಚು ಸ್ಪರ್ಧಿಗಳು ಈ ವಿಶ್ವಕಪ್ ನಲ್ಲಿ ಭಾಗವಹಿಸಲಿದ್ದಾರೆ. 12 ಜನರನ್ನು ಒಳಗೊಂಡಿರುವ ಎರಡು ತಂಡಗಳ ನಡುವೆ ರೋಲ್ ಬಾಲ್ ಪಂದ್ಯ ನಡೆಯಲಿದೆ. 12 ಜನರ ಪೈಕಿ ಕೇವಲ ಆರು ಜನರು ಮಾತ್ರ ಕ್ರೀಡಾಂಗಣದಲ್ಲಿ ಆಡಲಿದ್ದಾರೆ.

42. “ಜೊವೆನೆಲ್ ಮೊಯಿಸೆ (Jovenel Moise)” ರವರು ಯಾವ ದೇಶದ ನೂತನ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದರು?

ಅ) ಹೈಟಿ

ಆ) ಮೆಕ್ಸಿಕೊ

ಇ) ಕ್ಯೂಬಾ

ಈ) ಇಟಲಿ

ಹೈಟಿ

ಬಾಳೆಹಣ್ಣು ರಫ್ತುಗಾರ ಜೊವೆನೆಲ್ ಮೊಯಿಸೆ ಅವರು ಹೈಟಿ ದೇಶದ ನೂತನ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಹೈಟಿಯಲ್ಲಿ ಸರಿ ಸುಮಾರು ಒಂದು ವರ್ಷಗಳ ರಾಜಕೀಯ ಅಸ್ಥಿರತೆ ತಲೆದೋರಿತ್ತು.

www.karunaduexams.com

43. ಟಿ20 ಪಂದ್ಯದಲ್ಲಿ ತ್ರಿಶತಕ ಬಾರಿಸಿ ದಾಖಲೆ ಬರೆದ ಕ್ರಿಕೆಟಿಗನನ್ನು ಗುರುತಿಸಿ?

ಅ) ಮೋಹಿತ್ ಅಹಲಾವತ್

ಆ) ಕಿರಣ್ ಕಾರ್ತಿಕ್

ಇ) ಸ್ವರಾಜ್ ಸಿಂಗ್

ಈ) ಮದನ್ ಠಾಕೂರ್

ಮೋಹಿತ್ ಅಹಲಾವತ್

21 ವರ್ಷ ವಯಸ್ಸಿನ ವಿಕೆಟ್ ಕೀಪರ್ ಬ್ಯಾಟ್ಮನ್ ಮೋಹಿತ್ ಅಹಲಾವತ್ ದೆಹಲಿಯ ಲಲಿತಾ ಪಾರ್ಕ್‌ನಲ್ಲಿ ನಡೆದ ಸ್ಥಳೀಯ ಫ್ರೆಂಡ್ಸ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಫ್ರೆಂಡ್ಸ್ ಇಲೆವೆನ್ ವಿರುದ್ಧ ಮಾವಿ ಇಲೆವೆನ್ ಪರ ಆಡಿ 39 ಸಿಕ್ಸ್ ಬಾರಿಸುವ ಮೂಲಕ ಕೇವಲ 72 ಬಾಲ್‌ಗೆ ಅಮೋಘ ತ್ರಿ ಶತಕ ಸಿಡಿಸಿ ಟಿ–20 ಪಂದ್ಯದಲ್ಲಿ ಹೊಸ ದಾಖಲೆ ನಿರ್ಮಿಸಿದರು. ಅಹಲಾವತ್ 72 ಬಾಲ್‌ಗೆ 39 ಸಿಕ್ಸ್, 14 ಬೌಂಡ್ರಿ ಬಾರಿಸಿ ಅತ್ಯಂತ ಕಡಿಮೆ ಬಾಲ್‌ಗೆ 300 ರನ್ ಗಳಿಸಿದ ಕೀರ್ತಿಗೆ ಪಾತ್ರವಾಗಿದ್ದಾನೆ.

44. ಆಹಾರ ಧಾನ್ಯಗಳ ವಿತರಣೆಗೆ ನಗದು ರಹಿತ ವ್ಯವಸ್ಥೆಯನ್ನು ಜಾರಿಗೆ ತಂದ ರಾಜ್ಯ ಯಾವುದು?

ಅ) ಕರ್ನಾಟಕ

ಆ) ಗುಜರಾತ್

ಇ) ರಾಜಸ್ತಾನ

ಈ) ತಮಿಳುನಾಡು

ಗುಜರಾತ್

ಗುಜರಾತ್ ಸರ್ಕಾರ ನಗದು ರಹಿತ ಆಹಾರ ವಿತರಣೆ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯಡಿ ಫಲಾನುಭವಿಗಳು ಕೇವಲ ಆಧಾರ್ ಕಾರ್ಡ್ ತೋರಿಸುವ ಮೂಲಕ ಆಹಾರ ಧಾನ್ಯಗಳನ್ನು ಪಡೆಯಬಹುದಾಗಿದೆ. ಈ ಯೋಜನೆಯಡಿ ಫಲಾನುಭವಿಗಳನ್ನು ಸುಲಭವಾಗಿ ಗುರುತಿಸುವ ಮೂಲಕ ಹಂಚಿಕೆಯಲ್ಲಿ ಆಗಬಹುದಾದದ ಸೋರಿಕೆಯನ್ನು ತಡೆಯಬಹುದಾಗಿದೆ.

www.karunaduexams.com

45. ಈ ಕೆಳಗಿನ ಯಾರು ಸೋಮಾಲಿಯಾದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ?

ಅ) ಹಸನ್ ಶೇಖ್ ಮಹಮದ್

ಆ) ಅಬ್ದುಲ್ಲಾ ಮಹಮದ್ ಫರ್ಮಾಜೊ

ಇ) ಅಬ್ದುಲ್ಲಾ ಶೇಖ್ ಮಹಮದ್

ಈ) ಸೈಯದ್ ಅಕ್ತಾರ್

ಅಬ್ದುಲ್ಲಾ ಮಹಮದ್ ಫರ್ಮಾಜೊ

ಸೋಮಾಲಿಯಾದ ನೂತನ ಅಧ್ಯಕ್ಷರಾಗಿ ಮಾಜಿ ಪ್ರಧಾನಿ ಅಬ್ದುಲ್ಲಾ ಮಹಮದ್ ಫರ್ಮಾಜೊ ಅಧಿಕಾರ ವಹಿಸಿಕೊಂಡಿದ್ದಾರೆ. ಅಧ್ಯಕ್ಷರಾಗಿದ್ದ ಹಸನ್ ಶೇಖ್ ಮಹಮದ್ ನಿನ್ನೆ ನಡೆದ ಎರಡು ಸುತ್ತುಗಳ ಮತ ಎಣಿಕೆ ಬಳಿಕ ಪರಾಭವಗೊಂಡರು. ಸೋಮಾಲಿಯಾ ಮತ್ತು ಅಮೆರಿಕ ಪೌರತ್ವ ಹೊಂದಿರುವ ಫರ್ಮಾಜುರನ್ನು ಅಧ್ಯಕ್ಷರನ್ನಾಗಿ ಘೋಷಿಸಲಾಯಿತು. ಭೀಕರ ಬರಗಾಲ ಜೊತೆಗೆ ಹಲವಾರು ಜ್ವಲಂತ ಸಮಸ್ಯೆಗಳ ಸುಳಿಗೆ ಸಿಲುಕಿರುವ ಸೋಮಾಲಿಯಾ ಜನರ ಹಿತಾಸಕ್ತಿ ರಕ್ಷಿಸುವ ದೊಡ್ಡ ಹೊಣೆಗಾರಿಕೆ ಅವರ ಮೇಲಿದೆ.

46. 2016 ಡಾ. ಬಿ. ಸಿ ರಾಯ್ ರಾಷ್ಟ್ರೀಯ ಪ್ರಶಸ್ತಿಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಪಿ ರಘು ರಾಮ್

ಆ) ಜಯಶ್ರೀ ಮೆಹ್ತಾ

ಇ) ರಾಮೇಶ್ವರ್ ಯಾದವ್

ಈ) ಅನುಶ್ರೀ

ಪಿ ರಘು ರಾಮ್

ಸ್ತನ ಶಸ್ತ್ರಚಿಕಿತ್ಸೆ ಒಕ್ಕೂಟದ ಅಧ್ಯಕ್ಷ ಪಿ ರಘುರಾಮ್ ಅವರು 2016 ಡಾ. ಬಿ. ಸಿ. ರಾಯ್ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ನೀಡುತ್ತಿರುವ ಅತ್ಯುನ್ನತ ಪ್ರಶಸ್ತಿ ಇದಾಗಿದ್ದು, ಜುಲೈ 1, ವೈದ್ಯರ ದಿನದಂದು ರಾಷ್ಟ್ರಪತಿಗಳು ಈ ಪ್ರಶಸ್ತಿಯನ್ನು ಪ್ರಧಾನ ಮಾಡಲಿದ್ದಾರೆ.

www.karunaduexams.com

47. ಇತ್ತೀಚೆಗೆ ನಿಧನರಾದ “ಪಥಣಿ ಪಟ್ನಾಯಕ್” ಅವರು ಯಾವ ರಾಜ್ಯದ ಪ್ರಸಿದ್ಧ ಸಾಹಿತಿ?

ಅ) ಬಿಹಾರ

ಆ) ಜಾರ್ಖಂಡ್

ಇ) ಒಡಿಶಾ

ಈ) ಪಶ್ಚಿಮ ಬಂಗಾಳ

ಒಡಿಶಾ

ಒಡಿಶಾದ ಖ್ಯಾತ ಲೇಖಕ, ಕವಿ, ಶಿಕ್ಷಣ ತಜ್ಞ ಪಥಣಿ ಪಟ್ನಾಯಕ್ ಅವರು ಒಡಿಶಾದ ಕಟಕ್ ನಲ್ಲಿ ನಿಧನರಾದರು. ಪಟ್ನಾಯಕ್ ರವರು ಒಡಿಶಾ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಸಣ್ಣ ಕಥೆ, ಕವನ ಸೇರಿದಂತೆ ಸುಮಾರು 50ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದರು. ಪಟ್ನಾಯಕ್ ಅವರ ಆತ್ಮಕಥೆ “ಜೀಬನರ ಚಾಲಪಥ”ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

48. ಇತ್ತೀಚೆಗೆ ನಿಧನರಾದ “ಅಸಿಮ್ ಬಸು (Asim Basu)” ರವರು ಯಾವ ರಾಜ್ಯದ ಪ್ರಸಿದ್ಧ ರಂಗಭೂಮಿ ನಟ?

ಅ) ಕರ್ನಾಟಕ

ಆ) ಗುಜರಾತ್

ಇ) ಒಡಿಶಾ

ಈ) ರಾಜಸ್ತಾನ

ಒಡಿಶಾ

ಪ್ರಸಿದ್ಧ ರಂಗಭೂಮಿ ನಟ, ನಿರ್ದೇಶಕ, ಕಲಾ ನಿರ್ದೇಶಕ ಹಾಗೂ ಕಲಾವಿದ ಅಸಿಮ್ ಬಸು ರವರು ಒಡಿಶಾದ ಭುಬನೇಶ್ವರದಲ್ಲಿ ನಿಧನರಾದರು. ಒಡಿಶಾ ಸಿನಿಮಾಗಳಲ್ಲಿ ಕಲಾ ವಿನ್ಯಾಸಗಾರರಾಗಿ ಬಸು ಅವರು ಪ್ರಸಿದ್ಧರಾಗಿದ್ದರು. ಸುಮಾರು 200ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದರು.

www.karunaduexams.com

49. ರೈಲ್ವೆ ವಲಯದಲ್ಲಿ ಸುರಕ್ಷತೆ ವಿಷಯಕ್ಕೆ ಸಂಬಂಧಿಸಿದಂತೆ ಯಾವ ದೇಶದೊಂದಿಗೆ ಭಾರತ ತಾಂತ್ರಿಕ ಒಪ್ಪಂದಕ್ಕೆ ಸಹಿ ಹಾಕಿತು?

ಅ) ಜರ್ಮನಿ

ಆ) ಜಪಾನ್

ಇ) ಇಟಲಿ

ಈ) ರಷ್ಯಾ

ಇಟಲಿ

ಕೇಂದ್ರ ರೈಲ್ವೆ ಸಚಿವಾಲಯ ಇತ್ತೀಚೆಗೆ ರೈಲ್ವೆ ವಲಯದಲ್ಲಿ ಸುರಕ್ಷತೆಯನ್ನು ಹೆಚ್ಚಿಸಲು ಇಟಲಿಯ ಸಾರ್ವಜನಿಕ ರೈಲ್ವೆ ಸಂಸ್ಥೆ ಫೆರೊವೆ ಡೆಲ್ಲೊ ಸ್ಟಟೊ ಇಟಾಲಿಯನೆ ಗ್ರೂಫ್ ನೊಂದಿಗೆ ಸಹಿಹಾಕಿದೆ. ರೈಲ್ವೆ ವಲಯದಲ್ಲಿ ಸುರಕ್ಷಿತ ಲೆಕ್ಕತಪಾಸಣೆ ಸೇರಿದಂತೆ ರೈಲ್ವೆ ಸಂಚಾರದಲ್ಲಿ ಹೊಸ ತಂತ್ರಜ್ಞಾನಗಳ ಮೂಲಕ ರಕ್ಷಣಾ ಕ್ರಮಗಳನ್ನು ಹೆಚ್ಚಿಸುವುದು ಒಪ್ಪಂದದ ಮುಖ್ಯ ಉದ್ದೇಶ.

50. ಈ ಕೆಳಗಿನ ಯಾವ ರಾಜ್ಯದಲ್ಲಿ ರುಬೆಲ್ಲಾ-ದಡಾರ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಲಾಯಿತು?

ಅ) ಕರ್ನಾಟಕ

ಆ) ತಮಿಳುನಾಡು

ಇ) ಆಂಧ್ರ ಪ್ರದೇಶ

ಈ) ಮಹಾರಾಷ್ಟ್ರ

ಕರ್ನಾಟಕ

ಕೇಂದ್ರ ಆರೋಗ್ಯ ಸಚಿವಾಲಯ ರುಬೆಲ್ಲಾ-ದಡಾರ ಕಾಯಿಲೆಗಳ ವಿರುದ್ಧ ಲಸಿಕೆ ಕಾರ್ಯಕ್ರಮಕ್ಕೆ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಚಾಲನೆ ನೀಡಿತು. ಈ ಕಾರ್ಯಕ್ರಮದಡಿ ದೇಶದ 41 ಕೋಟಿ ಮಕ್ಕಳಿಗೆ ಲಸಿಕೆಯನ್ನು ಹಾಕುವ ಗುರಿಯನ್ನು ಹೊಂದಲಾಗಿದೆ. ಕರ್ನಾಟಕ, ತಮಿಳುನಾಡು, ಪುದುಚೇರಿ, ಲಕ್ಷದ್ವೀಪ ಹಾಗೂ ಗೋವಾದಲ್ಲಿ ಈ ಕಾರ್ಯಕ್ರಮ ಚಾಲನೆಗೊಂಡಿದೆ. ಕಾರ್ಯಕ್ರಮದಡಿ 9 ತಿಂಗಳಿಂದ 15 ವರ್ಷದೊಳಗಿನ ಮಕ್ಕಳಿಗೆ ಲಸಿಕೆಯನ್ನು ಹಾಕಲಾಗುವುದು.

www.karunaduexams.com

51. 2017 ಭೌದ್ಧಿಕ ಆಸ್ತಿ ಸೂಚ್ಯಂಕ (Intellectual Property Index) ದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 43

ಆ) 34

ಇ) 59

ಈ) 61

43

2017 ಭೌದ್ಧಿಕ ಆಸ್ತಿ ಸೂಚ್ಯಂಕದಲ್ಲಿ 45 ಪ್ರಮುಖ ರಾಷ್ಟ್ರಗಳ ಪೈಕಿ ಭಾರತ 43ನೇ ಸ್ಥಾನವನ್ನು ಪಡೆದುಕೊಂಡಿದೆ. ಅಮೆರಿಕ, ಯುಕೆ ಮತ್ತು ಜರ್ಮನಿ ಮೊದಲ ಮೂರು ಸ್ಥಾನದಲ್ಲಿವೆ. ಯುನೈಟೆಡ್ ಚೇಂಬರ್ ಆಫ್ ಕಾಮರ್ಸ್ ಈ ಸೂಚ್ಯಂಕವನ್ನು ಹೊರತರುತ್ತಿದೆ.

52. ಶಾಲಾ ಮಕ್ಕಳಲ್ಲಿ ಫುಟ್ಬಾಲ್ ಕ್ರೀಡೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಕೇಂದ್ರ ಸರ್ಕಾರ ಯಾವ ಯೋಜನೆಯನ್ನು ಜಾರಿಗೆ ತಂದಿದೆ?

ಅ) ಮಿಷನ್-IX-ಮಿಲಿಯನ್

ಆ) ಮಿಷನ್- XI- ಮಿಲಿಯನ್

ಇ) ಮಿಷನ್-XII- ಮಿಲಿಯನ್

ಈ) ಮಿಷನ್-XV- ಮಿಲಿಯನ್

ಮಿಷನ್- XI- ಮಿಲಿಯನ್

ಶಾಲಾ ಮಕ್ಕಳಲ್ಲಿ ಫುಟ್ಬಾಲ್ ಆಟವನ್ನು ಪ್ರೇರೆಪಿಸುವ ಸಲುವಾಗಿ ಕೇಂದ್ರ ಯುವ ವ್ಯವಹಾರ ಹಾಗೂ ಕ್ರೀಡಾ ಖಾತೆ ರಾಜ್ಯ ಸಚಿವ ವಿಜಯ್ ಗೋಯೆಲ್ ಅವರು "ಮಿಷನ್- XI- ಮಿಲಿಯನ್" ಕ್ರೀಡಾ ಯೋಜನೆಗೆ ಚಾಲನೆ ನೀಡಿದರು. ದೇಶವ್ಯಾಪ್ತಿ ಸುಮಾರು 11 ಮಿಲಿಯನ್ ಶಾಲೆ ಮಕ್ಕಳಲ್ಲಿ ಫುಟ್ಬಾಲ್ ಕ್ರೀಡೆಯ ಬಗ್ಗೆ ಸ್ಪೂರ್ತಿಯನ್ನು ರೂಪಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

www.karunaduexams.com

53. ಪ್ರಪ್ರಥಮ “ರಾಷ್ಟ್ರೀಯ ಮಹಿಳಾ ಸಂಸದರ (National Women's Parliament)” ಸಮಾವೇಶ ಯಾವ ರಾಜ್ಯದಲ್ಲಿ ಆಯೋಜಿಸಲಾಗಿತ್ತು?

ಅ) ಆಂಧ್ರ ಪ್ರದೇಶ

ಆ) ತಮಿಳುನಾಡು

ಇ) ಮಹಾರಾಷ್ಟ್ರ

ಈ) ಕರ್ನಾಟಕ

ಆಂಧ್ರ ಪ್ರದೇಶ

ಆಂಧ್ರ ಪ್ರದೇಶದ ಅಮರಾವತಿಯಲ್ಲಿ ಪ್ರಪ್ರಥಮ “ರಾಷ್ಟ್ರೀಯ ಮಹಿಳಾ ಸಂಸದರ (National Women's Parliament)” ಸಮಾವೇಶ ಇತ್ತೀಚೆಗೆ ಜರುಗಿತು. ಆಂಧ್ರ ಪ್ರದೇಶ ವಿಧಾನ ಸಭೆ ಈ ಸಮಾವೇಶವನ್ನು ಆಯೋಜಿಸಿತ್ತು. “ಎಂಪರಿಂಗ್ ವುವೆನ್-ಸ್ಟ್ರೆಂತನಿಂಗ್ ಡೆಮಾಕ್ರಸಿ” ಸಮಾವೇಶದ ಧ್ಯೇಯವಾಕ್ಯ.

54. ನೊಬೆಲ್ ಪ್ರಶಸ್ತಿ ವಿಜೇತ “ಸರ್ ಪೀಟರ್ ಮ್ಯಾನ್ಸ್ ಫೀಲ್ಡ್” ಇತ್ತೀಚೆಗೆ ನಿಧನರಾದರು. ಇವರು ಯಾವ ದೇಶಕ್ಕೆ ಸೇರಿದವರು?

ಅ) ಫ್ರಾನ್ಸ್

ಆ) ಇಂಗ್ಲೆಂಡ್

ಇ) ಅಮೆರಿಕ

ಈ) ರಷ್ಯಾ

ಇಂಗ್ಲೆಂಡ್

ಮ್ಯಾಗ್ನೆಟಿಕ್ ರೆಸೊನೆನ್ಸ್ ಇಮೇಜಿಂಗ್ (MRI) ಖ್ಯಾತಿ, ನೊಬೆಲ್ ಪುರಸ್ಕೃತ ಸರ್ ಪೀಟರ್ ಮ್ಯಾನ್ಸ್ ಫೀಲ್ಡ್” ನಿಧನರಾದರು. 2003 ರಲ್ಲಿ ಇವರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿತ್ತು.

www.karunaduexams.com

55. 18ನೇ ಏಷ್ಯಾ ಜೂನಿಯರ್ ಟೀಂ ಸ್ಕ್ವಾಷ್ ಚಾಂಪಿಯನ್ ಷಿಪ್ ನಲ್ಲಿ ಪ್ರಶಸ್ತಿ ಗೆದ್ದ ರಾಷ್ಟ್ರ ಯಾವುದು?

ಅ) ಭಾರತ

ಆ) ಚೀನಾ

ಇ) ಪಾಕಿಸ್ತಾನ

ಈ) ಶ್ರೀಲಂಕಾ

ಭಾರತ

ಭಾರತ ತಂಡ 18ನೇ ಏಷ್ಯಾ ಜೂನಿಯರ್ ಸ್ಕ್ವಾಷ್ ಚಾಂಪಿಯನ್ ಷಿಪ್ ನಲ್ಲಿ ಮಲೇಷಿಯಾ ತಂಡವನ್ನು 2-0 ರಲ್ಲಿ ಸೋಲಿಸುವ ಮೂಲಕ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಆ ಮೂಲಕ ಎರಡನೇ ಬಾರಿಗೆ ಈ ಚಾಂಪಿಯನ್ ಷಿಪ್ ನಲ್ಲಿ ಭಾರತ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. 2011 ರಲ್ಲಿ ಪಾಕಿಸ್ತಾನವನ್ನು ಸೋಲಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತ್ತು.

56. ಭಾರತೀಯ ಷೇರು ವಿನಿಮಯ ನಿಯಂತ್ರಣ ಮಂಡಳಿ (ಸೆಬಿ)ಯ ನೂತನ ಅಧ್ಯಕ್ಷರು ಯಾರು?

ಅ) ಅಜಯ್ ತ್ಯಾಗಿ

ಆ) ಸೌರವ್ ಕೊಠಾರಿ

ಇ) ಮನೀಷ್ ಸಿಂಗ್

ಈ) ಅನೂಪ್ ಮಜ್ನು

ಅಜಯ್ ತ್ಯಾಗಿ

1984ನೇ ಬ್ಯಾಚಿನ ಹಿರಿಯ ಐಎಎಸ್ ಅಧಿಕಾರಿ ಅಜಯ್ ತ್ಯಾಗಿ ಅವರು ಸೆಬಿಯ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಮಾರ್ಚ್ 1, 2017 ರಂದು ಯು.ಕೆ.ಸಿನ್ಹಾ ಅವರು ನಿವೃತ್ತಿ ಹೊಂದಲಿದ್ದು, ಅವರ ಸ್ಥಾನವನ್ನು ತ್ಯಾಗಿ ತುಂಬಲಿದ್ದಾರೆ.

www.karunaduexams.com

57. ಭಾರತದ ಮೊದಲ "ಕ್ವಾಲಿಟಿ & ರಿಲಿಯಾಬಿಲಿಟಿ (Quality and Reliability)" ಶಾಲೆಯನ್ನು ಸ್ಥಾಪಿಸಲಿರುವ ಐಐಟಿ ಯಾವುದು?

ಅ) ಐಐಟಿ, ಮುಂಬೈ

ಆ) ಐಐಟಿ, ಖರಗಪುರ್

ಇ) ಐಐಟಿ, ಮದ್ರಾಸ್

ಈ) ಐಐಟಿ, ಇಂದೋರ್

ಐಐಟಿ, ಖರಗಪುರ್

58. ಈ ಕೆಳಗಿನ ಯಾವ ರಾಜ್ಯ ಸರ್ಕಾರ ಇತ್ತೀಚೆಗೆ ಹಳ್ಳಿಗಳ ಅಭಿವೃದ್ದಿಗಾಗಿ "ಮುಖ್ಯಮಂತ್ರಿ ಸಮಗ್ರ ಗ್ರಾಮ್ಯ ಉನ್ನಾಯನ್ ಯೋಜನೆ"ಯನ್ನು ಜಾರಿಗೆ ತಂದಿದೆ?

ಅ) ಸಿಕ್ಕಿಂ

ಆ) ಅರುಣಾಚಲ ಪ್ರದೇಶ

ಇ) ಅಸ್ಸಾಂ

ಈ) ನಾಗಲ್ಯಾಂಡ್

ಅಸ್ಸಾಂ

ಅಸ್ಸಾಂ ಮುಖ್ಯಮಂತ್ರಿ ಸರಬನಂದ ಸೊನೊವಾಲ್ ಅವರು ಇತ್ತೀಚೆಗೆ ಮುಖ್ಯಮಂತ್ರಿ ಸಮಗ್ರ ಗ್ರಾಮ್ಯ ಉನ್ನಾಯನ್ ಯೋಜನೆಗೆ ಚಾಲನೆ ನೀಡಿದರು. ಹಳ್ಳಿಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದು ಯೋಜನೆಯ ಮುಖ್ಯ ಗುರಿ. ಇದಕ್ಕಾಗಿ ರೂ 30,000 ಕೋಟಿಯನ್ನು ಮುಂದಿನ ಐದು ವರ್ಷಗಳಲ್ಲಿ ವ್ಯಯಿಸಲಾಗುವುದು.

www.karunaduexams.com

59. ದೃಷ್ಟಿ ಮಾಂದ್ಯರಿಗಾಗಿ ವಿಶ್ವದ ಮೊದಲ ಬ್ರೈಲಿ ಅಟ್ಲಾಸ್ ಅನ್ನು ಯಾವ ದೇಶದಲ್ಲಿ ಪರಿಚಯಿಸಲಾಯಿತು?

ಅ) ಭಾರತ

ಆ) ರಷ್ಯಾ

ಇ) ಜಪಾನ್

ಈ) ಜರ್ಮನಿ

ಭಾರತ

ವಿಶ್ವದ ಮೊದಲ ಬ್ರೈಲಿ ಅಟ್ಲಾಸ್ ಅನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಡಾ. ಹರ್ಷವರ್ಧನ್ ರಾಥೋಡ್ ಅವರು ಬಿಡುಗಡೆಗೊಳಿಸಿದರು. "ಅಟ್ಲಾಸ್ ಫಾರ್ ವಿಷುಯಲಿ ಇಂಪೆರ್ಡ್" ನ್ಯಾಷನಲ್ ಅಟ್ಲಾಸ್ & ಥೆಮಾಟಿಕ್ ಮ್ಯಾಪಿಂಗ್ ಆರ್ಗನೇಸೆಷನ್" ಅಭಿವೃದ್ಧಿಪಡಿಸಿದೆ.

60. 4ನೇ BIMSTEC (ಬಿಮ್ ಸ್ಟೆಕ್) ಶೃಂಗಸಭೆ-2017 ಯಾವ ದೇಶದಲ್ಲಿ ನಡೆಯಲಿದೆ?

ಅ) ಭಾರತ

ಆ) ನೇಪಾಳ

ಇ) ಶ್ರೀಲಂಕಾ

ಈ) ಬಾಂಗ್ಲದೇಶ

ನೇಪಾಳ

ನಾಲ್ಕನೇ ಬಿಮ್ ಸ್ಟೆಕ್ ಶೃಂಗಸಭೆ ನೇಪಾಳದಲ್ಲಿ ನಡೆಯಲಿದೆ. ಬಿಮ್ ಸ್ಟೆಕ್ ಅನ್ನು 1997 ರಲ್ಲಿ ಸ್ಥಾಪಿಸಲಾಗಿದ್ದು, ಭೂತಾನ್, ಬಾಂಗ್ಲದೇಶ, ಭಾರತ, ಮ್ಯಾನ್ಮಾರ್, ಶ್ರೀಲಂಕಾ ಮತ್ತು ಥಾಯ್ಲೆಂಡ್ ಇದರ ಸದಸ್ಯ ರಾಷ್ಟ್ರಗಳಾಗಿವೆ.

61. ಭಾರತದ ಮೊದಲ ಸಾಮಾಜಿಕ ನಾವೀನ್ಯತೆ ಕೇಂದ್ರ "ಕಾಕತೀಯ ಹಬ್ ಫಾರ್ ಸೋಶಿಯಲ್ ಇನ್ನೋವೇಶನ್" ಯಾವ ರಾಜ್ಯದಲ್ಲಿ ಆರಂಭಿಸಲಾಯಿತು?

ಅ) ಆಂಧ್ರ ಪ್ರದೇಶ

ಆ) ತಮಿಳುನಾಡು

ಇ) ತೆಲಂಗಣ

ಈ) ಕರ್ನಾಟಕ

ತೆಲಂಗಣ

ದೇಶದ ಮೊದಲ ಸಾಮಾಜಿಕ ನಾವೀನ್ಯತೆ ಕೇಂದ್ರ "ಕಾಕತೀಯ ಹಬ್ ಫಾರ್ ಸೋಶಿಯಲ್ ಇನ್ನೋವೇಶನ್" ಅನ್ನು ತೆಲಂಗಣದಲ್ಲಿ ಸ್ಥಾಪಿಸಲಾಗಿದೆ. ತೆಲಂಗಣ ರಾಜ್ಯ ಸರ್ಕಾರದ ಅನುದಾನದಲ್ಲಿ ನಿರ್ಮಾಣಗೊಂಡಿರುವ ಈ ಕೇಂದ್ರವು ಗ್ರಾಮೀಣ ಮಟ್ಟದಲ್ಲಿ ಕೌಶಲ್ಯ ವೃದ್ದಿಸಲು ಕಾರ್ಯನಿರ್ವಹಿಸಲಿದೆ.

www.karunaduexams.com

62. ವಿಶ್ವ ವ್ಯಾಪಾರ ಸಂಘಟನೆ (WTO) ಗೆ ಶಾಶ್ವತ ಪ್ರತಿನಿಧಿಯಾಗಿ ನೇಮಕವಾದ ಭಾರತೀಯ ಯಾರು?

ಅ) ಲತಾ ಕೃಷ್ಣ ರಾವ್

ಆ) ಕಿರಣ್ ಮಜುಂದಾರ್

ಇ) ಜೆ.ಎಸ್.ದೀಪಕ್

ಈ) ನೀತು ಅಂಬಾನಿ

ಜೆ.ಎಸ್.ದೀಪಕ್

63. "ಹಾರ್ವರ್ಡ್ ಹ್ಯೂಮಾನಿಟೇರಿಯನ್ ಆಫ್ ದಿ ಇಯರ್" 2017 ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡವರು ಯಾರು?

ಅ) ಆಂಗ್ ಸನ್ ಸೂಕಿ

ಆ) ರಾಬಿನ್ ರಿಹಾನ ಫೆಂಟಿ

ಇ) ಬರಾಕ್ ಒಬಾಮ

ಈ) ಬಿಷಪ್ ಡೆಸ್ಮೆಂಡ್ ಟುಟು

ರಾಬಿನ್ ರಿಹಾನ ಫೆಂಟಿ

ಬಾರ್ಬೊಡೋಸ್ ದೇಶದ ಖ್ಯಾತ ಗೀತ ರಚನಕಾರ ಹಾಗೂ ಗಾಯಕ ರಾಬಿನ್ ರಿಹಾನ ಫೆಂಟಿ, ತಮ್ಮ ದೇಶದಲ್ಲಿ ಕ್ಯಾನ್ಸರ್ ರೋಗಕ್ಕೆ ನೀಡುವ ಚಿಕಿತ್ಸೆ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಶ್ರಮಿಸಿದಕ್ಕಾಗಿ, 2017 ರ "ಹಾರ್ವರ್ಡ್ ಹ್ಯೂಮಾನಿಟೇರಿಯನ್ ಆಫ್ ದಿ ಇಯರ್" ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇದಲ್ಲದೆ ಕೆರೆಬಿಯನ್ ವಿದ್ಯಾರ್ಥಿಗಳು ಅಮೆರಿಕಾದಲ್ಲಿ ಉನ್ನತ ಶಿಕ್ಷಣ ಪಡೆಯಲು ನೆರವಾಗಲು ಶಿಕ್ಷಣ ವೇತನವನ್ನು ಸಹಾ ನೀಡುತ್ತಿದ್ದಾರೆ. ಜನರ ಜೀವನ ಮಟ್ಟದಲ್ಲಿ ಸುಧಾರಣೆ ಮಾಡುವವರಿಗೆ ಮತ್ತು ಜನರು ಉನ್ನತ ಮಟ್ಟದ ಸಾಧನೆಗೆ ಪ್ರೋತ್ಸಾಹಿಸುವವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

www.karunaduexams.com

64. “ತೇಜಸ್ವಿನಿ” ಯೋಜನೆಗೆ ವಿಶ್ವ ಬ್ಯಾಂಕ್ ಎಷ್ಟು ಮೊತ್ತವನ್ನು ಸಾಲದ ರೂಪದಲ್ಲಿ ಕೇಂದ್ರ ಸರ್ಕಾರಕ್ಕೆ ನೀಡಲಿದೆ?

ಅ) $ 55 ಮಿಲಿಯನ್

ಆ) $ 63 ಮಿಲಿಯನ್

ಇ) $ 77 ಮಿಲಿಯನ್

ಈ) $ 85 ಮಿಲಿಯನ್

$ 63 ಮಿಲಿಯನ್

ಜಾರ್ಖಂಡ್ ರಾಜ್ಯದ ಹದಿಹರೆಯದ ಹೆಣ್ಣು ಮಕ್ಕಳ ಆರ್ಥಿಕ ಮತ್ತು ಸಾಮಾಜಿಕವಾಗಿ ಸಬಲೀಕರಣಗೊಳಿಸುವ ಉದ್ದೇಶ ಹೊಂದಿದ “ತೇಜಸ್ವಿನಿ” ಯೋಜನೆಗೆ ವಿಶ್ವ ಬ್ಯಾಂಕ್ $63 ಮಿಲಿಯನ್ ಮೊತ್ತದ ಸಾಲವನ್ನು ಭಾರತ ಸರ್ಕಾರಕ್ಕೆ ನೀಡಲಿದೆ. ಜಾರ್ಖಂಡ್ ರಾಜ್ಯದ 17 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಿದ್ದು, ಜೂನ್ 30, 2021ಕ್ಕೆ ಯೋಜನೆ ಅಂತ್ಯಗೊಳ್ಳಲಿದೆ.

65. ಇತ್ತೀಚೆಗೆ ಶಾಸನ ಬದ್ಧ ಸಂಸ್ಥೆಯೊಂದು ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆಯಾದ ಬಿಬಿಸಿ (BBC) ಗೆ ನಿರ್ಬಂಧ ಹೇರಿದೆ, ಈ ಸಂಸ್ಥೆ ಯಾವುದು?

ಅ) ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ

ಆ) ಗಿರ್ ರಕ್ಷಿತಾರಣ್ಯ ಪ್ರಾಧಿಕಾರ

ಇ) ರಾಷ್ಟ್ರೀಯ ವನ್ಯಜೀವಿ ಸುರಕ್ಷಾ ಸಂಸ್ಥೆ

ಈ) ಭಾರತೀಯ ಜೀವವೈವಿಧ್ಯ ಸಂಸ್ಥೆ

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ

ಅಸ್ಸಾಂನ ಕಾಜಿರಂಗಾ ರಾಷ್ಟ್ರೀಯ ಉದ್ಯಾನದಲ್ಲಿ ನಡೆಯುತ್ತಿರುವ ಕಳ್ಳಬೇಟೆ ಬಗ್ಗೆ ತನ್ನ ಸಾಕ್ಷಾಚಿತ್ರದಲ್ಲಿ ತಪ್ಪಾಗಿ ವರದಿ ಮಾಡಿದ ಬ್ರಿಟಿಷ್ ಬ್ರಾಡ್ ಕಾಸ್ಟಿಂಗ್ ಕಾರ್ಪರೇಷನ್ ನ ಎಲ್ಲಾ ಪತ್ರಕರ್ತರಿಗೆ ಮತ್ತು ಮಾಧ್ಯಮದವರಿಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ 5 ವರ್ಷಗಳ ನಿಷೇಧ ಹೇರಿದೆ. ಬಿಬಿಸಿ ತನ್ನ ‘ಕಿಲ್ಲಿಂಗ್ ಫಾರ್ ಕನ್ಸರ್ವೆಷನ್’ ಎಂಬ ಸಾಕ್ಷಾಚಿತ್ರದಲ್ಲಿ ಕಳ್ಳಬೇಟೆ ಮಾಡುವವರನ್ನು ಅರಣ್ಯ ರಕ್ಷಕರು ಯಾವುದೇ ಪೂರ್ವಾನುಮತಿ ಇಲ್ಲದೆ

www.karunaduexams.com

ಹತ್ಯೆಗೈಯಬಹುದಾಗಿದೆ ಎಂದು ತಪ್ಪಾಗಿ ವರದಿ ಮಾಡಿತ್ತು. ಅಲ್ಲದೆ ಈ ವ್ಯವಸ್ಥೆ ಅರಣ್ಯ ವಾಸಿಗಳಿಗೆ ಮರಣ ಶಾಸನವಾಗಿ ಪರಿಣಮಿಸಿದೆ ಎಂದೂ ಸಹ ಪ್ರಸಾರ ಮಾಡಿತ್ತು.

66. 89 ನೇ ಆಸ್ಕರ್ ಅಕಾಡಮಿ ಪ್ರಶಸ್ತಿ ಸಮಾರಂಭದಲ್ಲಿ 'ವಿದೇಶಿ ಭಾಷಾ ಚಲನಚಿತ್ರ' ವಿಭಾಗದಲ್ಲಿ ಪ್ರಶಸ್ತಿಗಳಿಸಿದ ಚಿತ್ರ ಯಾವುದು?

ಅ) ಲಾ ಲಾ ಲ್ಯಾಂಡ್

ಆ) ಕೆರೆಬಿಯನ್ ಸೀ

ಇ) ದಿ ಸೇಲ್ಸ್ ಮನ್

ಈ) ದಿ ಬ್ಲಡ್ ಬೇಬಿ

ದಿ ಸೇಲ್ಸ್ ಮನ್

ಅಸ್ಗರ್ ಫರ್ಹಾದಿ ನಿರ್ದೇಶನದ ಇರಾನಿ ಚಲನಚಿತ್ರ 'ದಿ ಸೇಲ್ಸ್ ಮನ್' 89 ನೇ ಆಸ್ಕರ್ ಅಕಾಡಮಿ ಪ್ರಶಸ್ತಿ ಸಮಾರಂಭದಲ್ಲಿ 'ವಿದೇಶಿ ಭಾಷಾ ಚಲನಚಿತ್ರ' ವಿಭಾಗದಲ್ಲಿ ಉತ್ತಮ ಚಿತ್ರವಾಗಿ ಹೊರಹೊಮ್ಮಿತು. ಅಸ್ಗರ್ ಫರ್ಹಾದಿ ಯವರಿಗೆ ಇದು ಎರಡನೇ ಆಸ್ಕರ್ ಪ್ರಶಸ್ತಿಯಾಗಿದೆ ಈ ಹಿಂದೆ ಅಂದರೆ 5 ವರ್ಷಗಳ ಹಿಂದೆ 'ಎ ಸಪರೇಷನ್'ಎಂಬ ಚಿತ್ರಕ್ಕೆ ಅಕಾಡಮಿ ಪ್ರಶಸ್ತಿ ಲಭಿಸಿತ್ತು.

67. ಭಾರತದ ಪ್ರಥಮ "ಅಂತ್ಯೋದಯ ಎಕ್ಸ್ ಪ್ರೆಸ್" ರೈಲ್ವೆ ಜಾಲವನ್ನು ಯಾವ ಎರಡು ನಗರಗಳ ನಡುವೆ ಪ್ರಾರಂಭಿಸಲಾಗಿದೆ?

ಅ) ಎರ್ನಾಕುಲಂ ಮತ್ತು ಹೌರಾ

ಆ) ಎರ್ನಾಕುಲಂ ಮತ್ತು ಅಲಹಾಬಾದ್

ಇ) ಲಕ್ನೌ ಮತ್ತು ತಿರುಚನಾಪಲ್ಲಿ

ಈ) ನಿಜಾಮುದ್ದೀನ್ ಮತ್ತು ಪಲಕ್ಕಾಡ್

ಎರ್ನಾಕುಲಂ ಮತ್ತು ಹೌರಾ

ಸಾಮಾನ್ಯ ಜನರಿಗಾಗಿ ಅತಿ ಹೆಚ್ಚು ಸಾಂದ್ರತೆ ಹೊಂದಿರುವ ಮಾರ್ಗದಲ್ಲಿ 'ಮೀಸಲು ರಹಿತ' ಬೋಗಿಗಳನ್ನು ಹೊಂದಿರುವ ಅತ್ಯಂತ ವೇಗದ ರೈಲ್ವೆ ಸೇವೆಯನ್ನು ಎರ್ನಾಕುಲಂ ಮತ್ತು ಹೌರಾ ನಗರಗಳ ನಡುವೆ ಭಾರತದ



www.karunaduexams.com

ಪ್ರಥಮ "ಅಂತ್ಯೋದಯ ಎಕ್ಸ್ ಪ್ರೆಸ್" ಗೆ ಚಾಲನೆ ನೀಡಲಾಯಿತು. ಈ ಬೋಗಿಗಳಲ್ಲಿ ಐಶಾರಾಮಿ ಬೋಗಿಗಳಲ್ಲಿರುವಂತೆ ಅತ್ಯಾಧುನಿಕ ಸೀಟು, ಎಲ್.ಇ.ಡಿ. ಬೆಳಕು ಮತ್ತು ಶೌಚಾಲಯ ವ್ಯವಸ್ಥೆ ಹೊಂದಿದ್ದು, ಕಡಿಮೆ ಟಿಕೆಟ್ ದರ ನಿಗದಿಪಡಿಸಲಾಗಿದೆ.

68. ಮೊಬೈಲ್ ವರ್ಲ್ಡ್ ಕಾಂಗ್ರೆಸ್ 2017 ಯಾವ ನಗರದಲ್ಲಿ ಆಯೋಜನೆಗೊಂಡಿದೆ?

ಅ) ಟೋಕಿಯೊ

ಆ) ದೆಹಲಿ

ಇ) ಶಾಂಗಾಯ್

ಈ) ಬಾರ್ಸಿಲೋನ

ಬಾರ್ಸಿಲೋನ

2017 ಮೊಬೈಲ್ ವರ್ಲ್ಡ್ ಕಾಂಗ್ರೆಸ್ ಸ್ಪೇನ್ ನ ಬಾರ್ಸಿಲೋನದಲ್ಲಿ ಫೆಬ್ರವರಿ 27 ರಿಂದ ಮಾರ್ಚ್ 2 ರವರೆಗೆ ನಡೆಯಲಿದೆ. ಗ್ಲೋಬಲ್ ಸಿಸ್ಟಂ ಫಾರ್ ಮೊಬೈಲ್ ಅಸೋಸಿಯೇಷನ್ (GSMA) ಈ ಕಾಂಗ್ರೆಸ್ ಅನ್ನು ಆಯೋಜಿಸುತ್ತಿದೆ.

69. ಸೈಬರ್ ಭದ್ರತೆಗೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕ್ ಯಾವ ಸಮಿತಿಯನ್ನು ರಚಿಸಲಿದೆ?

ಅ) ಮೀನಾ ಹೇಮಚಂದ್ರ ಸಮಿತಿ

ಆ) ಸುಗುಣ ಚಂದ್ರಶೇಖರ್ ಸಮಿತಿ

ಇ) ಹೆಚ್ ಆರ್ ಖಾನ್ ಸಮಿತಿ

ಈ) ತುಷಾರ್ ಕೃಷ್ಣ ಸಮಿತಿ

ಮೀನಾ ಹೇಮಚಂದ್ರ ಸಮಿತಿ

ಸೈಬರ್ ಭದ್ರತೆಗೆ ಸಂಬಂಧಿಸಿದ ವಿವಿಧ ಸವಾಲುಗಳು ಹಾಗೂ ಅವುಗಳನ್ನು ಎದುರಿಸಲು ಕೈಗೊಳ್ಳಬೇಕಾದ ಸೂಕ್ತ ಕ್ರಮಗಳನ್ನು ಶಿಫಾರಸ್ಸನ್ನು ಮಾಡಲು ಭಾರತೀಯ ರಿಸರ್ವ್ ಬ್ಯಾಂಕ್ ಮೀನಾ ಹೇಮಚಂದ್ರ ಸಮಿತಿಯನ್ನು ರಚಿಸಲಿದೆ.

www.karunaduexams.com

70. 'ಸೆಕ್ಸ್ ರೇಷಿಯೊ ಮಾನಿಟರಿಂಗ್ ಡಾಷ್ ಬೋರ್ಡ್' ಎಂಬ ಪ್ರಾಯೋಗಿಕ ಯೋಜನೆಯನ್ನು ಯಾವ ರಾಜ್ಯದಲ್ಲಿ ಪ್ರಾರಂಭಿಸಿದೆ?

ಅ. ಬಿಹಾರ

ಆ. ಪಂಜಾಬ್

**ಇ. ಹರಿಯಾಣ**

ಈ. ಪಶ್ಚಿಮ ಬಂಗಾಳ

(ಮಗಳನ್ನು ಉಳಿಸಿ, ಮಗಳನ್ನು ಓದಿಸಿ ಕಾರ್ಯಕ್ರಮದಡಿ ಹರಿಯಾಣ ರಾಜ್ಯ ಸರ್ಕಾರ 'ಸೆಕ್ಸ್ ರೇಷಿಯೊ ಮಾನಿಟರಿಂಗ್ ಡಾಷ್ ಬೋರ್ಡ್' ಎಂಬ ಪ್ರಾಯೋಗಿಕ ಯೋಜನೆಯನ್ನು ರಾಷ್ಟ್ರೀಯ ಮಾಹಿತಿ ಕೇಂದ್ರದ ಸಹಕಾರದೊಂದಿಗೆ ಪ್ರಾರಂಭಿಸಿದೆ. ಆರೋಗ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಪ್ರತಿ ತಿಂಗಳು ಎಲ್ಲಾ ಹಳ್ಳಿಗಳ ಲಿಂಗಾನುಪಾತದ ದತ್ತಾಂಶವನ್ನು ಪಡೆದು ಅಂತರ್ಜಾಲದಲ್ಲಿ ಅಳವಡಿಸಲಿದೆ.)

71. ಸೌರ ವಿದ್ಯುತ್ ಫಲಕಗಳನ್ನು ಅಳವಡಿಸಿಕೊಂಡ ಭಾರತದ ಮೊಟ್ಟಮೊದಲ ಯುದ್ಧನೌಕೆ ಯಾವುದು?

ಅ) ಐಎನ್‌ಎಸ್ ವಿದ್ಯಾಗಿರಿ

ಆ) ಐಎನ್‌ಎಸ್ ಸರ್ವೇಕ್ಷಕ್

ಇ) ಐಎನ್‌ಎಸ್ ಸಿಂಧೂದುರ್ಗ್

ಈ) ಐಎನ್‌ಎಸ್ ಗೋದಾವರಿ

ಐಎನ್‌ಎಸ್ ಸರ್ವೇಕ್ಷಕ್

ಐಎನ್‌ಎಸ್ ಸರ್ವೇಕ್ಷಕ್ ಸೌರ ವಿದ್ಯುತ್ ಫಲಕಗಳನ್ನು ಅಳವಡಿಸಿಕೊಂಡ ಭಾರತದ ಮೊಟ್ಟ ಮೊದಲ ಯುದ್ಧನೌಕೆಯಾಗಿದೆ. ಸಂವಹನ ಸಾಧಕ, ಬ್ಯಾಟರಿ ಚಾರ್ಜಿಂಗ್ ಸೇರಿದಂತೆ ವಿವಿಧ ಕಾರ್ಯಾಚರಣೆಗೆ ಸೌರಶಕ್ತಿಯನ್ನು ಬಳಸಲಾಗುತ್ತಿದೆ.

www.karunaduexams.com

72. “ಅಮನ್-2017 (AMAN-2017)” ಯಾವ ದೇಶದ ಬಹು ರಾಷ್ಟ್ರ ನೌಕ ಸಮರಭ್ಯಾಸ ಆಗಿದೆ?

ಅ) ಇಂಡೋನೇಷ್ಯಾ

ಆ) ಪಾಕಿಸ್ತಾನ

ಇ) ಬಾಂಗ್ಲದೇಶ

ಈ) ಜಪಾನ್

ಪಾಕಿಸ್ತಾನ

ಅಮನ್-2017 ಪಾಕಿಸ್ತಾನ ಆಯೋಜಿಸುವ ನೌಕಸಮರಭ್ಯಾಸ. ಇತ್ತೀಚೆಗೆ ಇದರ ಐದನೇ ಆವೃತ್ತಿ ಕರಾಚಿಯ ನೌಕ ಬಂದರಿನಲ್ಲಿ ನಡೆಯಿತು. “ಟುಗೆದರ್ ಫಾರ್ ಪೀಸ್” ಧ್ಯೇಯವಾಕ್ಯದಡಿ ನಡೆದ ಸಮರಭ್ಯಾಸದಲ್ಲಿ 37 ರಾಷ್ಟ್ರಗಳು ಭಾಗವಹಿಸಿದ್ದವು.

73. ಈ ಕೆಳಗಿನ ಯಾವ ದಿನದಂದು “ರಾಷ್ಟ್ರೀಯ ಜಂತುಹುಳು ನಿವಾರಣೆ ದಿನ”ವನ್ನು ಆಚರಿಸಲಾಗುತ್ತದೆ?

ಅ) ಫೆಬ್ರವರಿ 09

ಆ) ಫೆಬ್ರವರಿ 10

ಇ) ಫೆಬ್ರವರಿ 11

ಈ) ಫೆಬ್ರವರಿ 12

ಫೆಬ್ರವರಿ 10

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ರಾಷ್ಟ್ರೀಯ ಜಂತುಹುಳು ನಿವಾರಣೆ ದಿನವನ್ನು ಫೆಬ್ರವರಿ 10 ರಂದು ಪ್ರತಿ ವರ್ಷ ಆಚರಿಸುತ್ತದೆ. ಅಂಗನವಾಡಿ ಮತ್ತು ಶಾಲಾ ಮಕ್ಕಳಲ್ಲಿ ಜಂತು ಹುಳಗಳನ್ನು ನಿವಾರಿಸುವುದು ಈ ದಿನದ ಉದ್ದೇಶ.

74. ಈ ಕೆಳಗಿನ ಯಾವುದು ವಿಶ್ವದ ಅತಿ ದೊಡ್ಡ ಏರ್ ಷೋ ಎಂದು ಖ್ಯಾತಿ ಪಡೆದಿದೆ?

ಅ) ಬೆಂಗಳೂರು ಏರ್ ಷೋ

ಆ) ಪ್ಯಾರಿಸ್ ಏರ್ ಷೋ

ಇ) ಬೀಜಿಂಗ್ ಏರ್ ಷೋ

www.karunaduexams.com

ಈ) ಟೋಕಿಯೋ ಏರ್ ಷೋ

ಪ್ಯಾರಿಸ್ ಏರ್ ಷೋ

ಪ್ಯಾರಿಸ್ ಏರ್ ಷೋ ವಿಶ್ವದ ಅತಿದೊಡ್ಡ ಏರ್ ಷೋ. ಇದಕ್ಕೆ ವಿಶ್ವದ ಪುರಾತನ ಏರ್ ಷೋ ಎಂಬ ಖ್ಯಾತಿಯೂ ಇದೆ. 1909ರಲ್ಲೇ ಆರಂಭವಾದ ಪ್ಯಾರಿಸ್ ಏರ್ ಷೋ ನಿರಂತರವಾಗಿ ಮುಂದುವರಿದುಕೊಂಡು ಬಂದಿದೆ. ಪ್ರತಿ ಎರಡು ವರ್ಷಗಳಿಗೊಮ್ಮೆ ಉತ್ತರ ಪ್ಯಾರಿಸ್‌ನ ಲೇ ಬಾರ್ಕ್ವೆಟ್ ವಿಮಾನ ನಿಲ್ದಾಣದಲ್ಲಿ ನಡೆಯುವ ಷೋನಲ್ಲಿ ದೇಶ-ವಿದೇಶಗಳ ನೂರಾರು ಸಂಸ್ಥೆಗಳು ಭಾಗವಹಿಸುತ್ತವೆ. ರಕ್ಷಣಾ ಸಚಿವಾಲಯ ಮತ್ತಿತರ ಸಂಸ್ಥೆಗಳ ಸಹಯೋಗದಲ್ಲಿ ನಡೆಯುವ ಏರೋ ಇಂಡಿಯಾ ವಿಶ್ವದಲ್ಲೇ ಎರಡನೇ ಅತಿ ದೊಡ್ಡ ಏರ್ ಷೋ ಎಂಬ ಹೆಗ್ಗಳಿಕೆ ಪಡೆದುಕೊಂಡಿದೆ.

75. "ಎರಡನೇ ಗೇಟ್ ವೇ ಆಫ್ ಇಂಡಿಯಾ ಜಿಯೋ ಎಕಾನಮಿಕ್ ಡೈಲಾಗ್-2017 (2nd Gateway of India Geo Economic Dialogue)" ಅನ್ನು ಯಾವ ಸಚಿವಾಲಯ ಆಯೋಜಿಸುತ್ತಿದೆ?

ಅ) ವಿದೇಶಾಂಗ ವ್ಯವಹಾರ ಸಚಿವಾಲಯ

ಆ) ಗೃಹ ಸಚಿವಾಲಯ

ಇ) ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ

ಈ) ಹಣಕಾಸು ಸಚಿವಾಲಯ

ವಿದೇಶಾಂಗ ವ್ಯವಹಾರ ಸಚಿವಾಲಯ

"ಎರಡನೇ ಗೇಟ್ ವೇ ಆಫ್ ಇಂಡಿಯಾ ಜಿಯೋ ಎಕಾನಮಿಕ್ ಡೈಲಾಗ್-2017" ಮುಂಬೈ, ಮಹಾರಾಷ್ಟ್ರದಲ್ಲಿ ಫೆಬ್ರವರಿ 13-14 ರಂದು ನಡೆಯಲಿದ್ದು, ವಿದೇಶಾಂಗ ವ್ಯವಹಾರ ಸಚಿವಾಲಯ ಸಹಯೋಗದಡಿ ಆಯೋಜಿಸಲಾಗುತ್ತಿದೆ.

76. "2017 ವಿಶ್ವ ರೇಡಿಯೋ ದಿನ" ದ ಧ್ಯೇಯವಾಕ್ಯ ________________?

ಅ) Radio Is You

ಆ) Radio for Communication

ಇ) Radio for Better Communication

ಈ) Radio for Lonely Time

Radio Is You

www.karunaduexams.com

ವಿಶ್ವ ರೇಡಿಯೋ ದಿನವನ್ನು ಪ್ರತಿ ವರ್ಷ ಫೆಬ್ರವರಿ 13 ರಂದು ಆಚರಿಸಲಾಗುತ್ತಿದೆ. Radion Is You ಇದು ವಿಶ್ವ ರೇಡಿಯೋ ದಿನದ ಧ್ಯೇಯವಾಕ್ಯ.

77. "ಇನ್ಸ್ಟಿಟ್ಯೂಟ್ ಆಫ್ ಚಾರ್ಟೆಂಡ್ ಅಕೌಂಟ್ ಆಫ್ ಇಂಡಿಯಾ (ICAI)" ಅಧ್ಯಕ್ಷರು ಯಾರು?

ಅ) ನಿಲೇಶ್ ವಿಕಮ್ಸೆ

ಆ) ಸುರೇಶ್ ಚಂದ್ರ

ಇ) ರಮಣ ಗೋಗುಲ

ಈ) ಅಮೃತ್ ಅರೋರ

ನಿಲೇಶ್ ವಿಕಮ್ಸೆ

ನಿಲೇಶ್ ಶಿವ್ಜಿ ವಿಕಮ್ಸೆ ಅವರು "ಇನ್ಸ್ಟಿಟ್ಯೂಟ್ ಆಫ್ ಚಾರ್ಟೆಂಡ್ ಅಕೌಂಟ್ ಆಫ್ ಇಂಡಿಯಾ (ICAI)"ದ ಹೊಸ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. 2016-17 ರಿಂದ ವಿಕಮ್ಸೆ ಅವರು ಐಸಿಎಐ ನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು.

78. ಯಾವ ರಾಜ್ಯ ಫೆಬ್ರವರಿ 14 ರಂದು "ಮಾತೃ ಪಿತೃ ದಿನ"ವೆಂದು ಆಚರಿಸಲು ನಿರ್ಧರಿಸಿದೆ?

ಅ) ಜಾರ್ಖಂಡ್

ಆ) ಚತ್ತೀಸ್ ಘರ್

ಇ) ಮಹಾರಾಷ್ಟ್ರ

ಈ) ಅಸ್ಸಾಂ

ಚತ್ತೀಸ್ ಘರ್

79. 2017 ಐಸಿಸಿ ಟಿ-20 ಅಂಧರ ವಿಶ್ವಕಪ್ ಕ್ರಿಕೆಟ್ ಪ್ರಶಸ್ತಿ ಗೆದ್ದ ರಾಷ್ಟ್ರ ಯಾವುದು?

ಅ) ಭಾರತ

ಆ) ಬಾಂಗ್ಲದೇಶ

ಇ) ಪಾಕಿಸ್ತಾನ

ಈ) ಶ್ರೀಲಂಕಾ

www.karunaduexams.com

ಭಾರತ

ಬೆಂಗಳೂರಿನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನವನ್ನು ಮಣಿಸಿ ಭಾರತ 2017 ಐಸಿಸಿ ಟಿ-20 ಅಂಧರ ವಿಶ್ವಕಪ್ ಕ್ರಿಕೆಟ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಆ ಮೂಲಕ ಸತತ ಎರಡನೇ ಬಾರಿಗೆ ವಿಶ್ವಕಪ್ ಚಾಂಪಿಯನ್ ಪಟ್ಟ ಅಲಂಕರಿಸಿತ್ತು.

80. "ಇಂಟರ್ನ್ಯಾಷನಲ್ ಡೇ ಆಫ್ ವುಮೆನ್ ಅಂಡ್ ಗರ್ಲ್ಸ್ ಇನ್ ಸೈನ್ಸ್ (International Day of Women and Girls in Science)" ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಫೆಬ್ರವರಿ 11

ಆ) ಫೆಬ್ರವರಿ 12

ಇ) ಫೆಬ್ರವರಿ 13

ಈ) ಫೆಬ್ರವರಿ 14

ಫೆಬ್ರವರಿ 11

81. "ಎರಡನೇ ಅಂತಾರಾಷ್ಟ್ರೀಯ ಸ್ಪೈಸ್ (ಮಸಾಲೆ ಪದಾರ್ಥ) ಸಮಾವೇಶ" ಯಾವ ರಾಜ್ಯದಲ್ಲಿ ನಡೆಯಿತು?

ಅ) ಕೇರಳ

ಆ) ಮಹಾರಾಷ್ಟ್ರ

ಇ) ತಮಿಳುನಾಡು

ಈ) ಕರ್ನಾಟಕ

ಕೇರಳ

ಕೇರಳದ ಕೊವಲಂನಲ್ಲಿ ಎರಡನೇ ಅಂತಾರಾಷ್ಟ್ರೀಯ ಸ್ಪೈಸ್ ಸಮಾವೇಶ ಫೆಬ್ರವರಿ 12 ರಂದು ಆರಂಭಗೊಂಡಿತು. ಆಲ್ ಇಂಡಿಯಾ ಸ್ಪೈಸಸ್ ಎಕ್ಸ್ ಪೋರ್ಟರ್ಸ್ ಫೋರಂ ಈ ಸಮಾವೇಶವನ್ನು ಆಯೋಜಿಸುತ್ತಿದೆ.

www.karunaduexams.com

82. ಈ ಮುಂದಿನ ಯಾವ ರಾಜ್ಯದಲ್ಲಿ “2017 UNESCO ನೈಸರ್ಗಿಕ ಪಾರಂಪರಿಕ ಉತ್ಸವವನ್ನು (Natural Heritage Festival)” ಆಯೋಜಿಸಲಾಗಿತ್ತು?

ಅ) ರಾಜಸ್ತಾನ

ಆ) ಹಿಮಾಚಲ ಪ್ರದೇಶ

ಇ) ಸಿಕ್ಕಿಂ

ಈ) ತೆಲಂಗಣ

ಹಿಮಾಚಲ ಪ್ರದೇಶ

“2017 UNESCO ನೈಸರ್ಗಿಕ ಪಾರಂಪರಿಕ ಉತ್ಸವವನ್ನು ಹಿಮಾಚಲ ಪ್ರದೇಶದ ದಿ ಗ್ರೇಟ್ ಹಿಮಾಲಯನ್ ನ್ಯಾಷನಲ್ ಪಾರ್ಕ್ ನಲ್ಲಿ ಆಯೋಜಿಸಲಾಗಿತ್ತು. ಭಾರತೀಯ ವನ್ಯಜೀವಿ ಸಂಸ್ಥೆ ಸಹಯೋಗದಲ್ಲಿ ಈ ಉತ್ಸವವನ್ನು ಆಯೋಜಿಸಲಾಗಿತ್ತು.

83. ಜರ್ಮನಿಯ ನೂತನ ಅಧ್ಯಕ್ಷರಾಗಿ ಈ ಕೆಳಗಿನ ಯಾರು ಆಯ್ಕೆಯಾಗಿದ್ದಾರೆ?

ಅ) ಜೊಬಿನ್ ಗಾಕ್

ಆ) ಕ್ರಿಸ್ಟಿಯನ್ ವುಲ್ಫ್

ಇ) ಫ್ರಾಂಕ್ – ವಾಲ್ಟರ್ ಸ್ಟೈನ್ ಮಿಯರ್

ಈ) ಒಲಿವಿಯಾ ಜೋನ್ಸ್

ಫ್ರಾಂಕ್ – ವಾಲ್ಟರ್ ಸ್ಟೈನ್ ಮಿಯರ್

ಸೋಶಿಯಲ್ ಡೆಮಾಕ್ರಟಿಕ್ ಪಕ್ಷದ ಸದಸ್ಯ ಫ್ರಾಂಕ್ – ವಾಲ್ಟರ್ ಸ್ಟೈನ್ ಮಿಯರ್ ರವರು ಜರ್ಮನಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

84. ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಅಸೋಚಾಂ)ದ ನೂತನ ಅಧ್ಯಕ್ಷರು ಯಾರು?

ಅ) ಅರುಣಾ ಭಾರ್ಗವ

ಆ) ರವೀಶ್ ಚಂದ್ರ

ಇ) ಸಂದೀಪ್ ಜಜೊಡಿಯ

www.karunaduexams.com

ಈ) ಸುನೀಲ್ ಕನೋರಿಯಾ

ಸಂದೀಪ್ ಜಜೊಡಿಯ

ಮೊನ್ನೆಟ್ ಇಸ್ಪತ್ & ಎನರ್ಜಿ ಲಿಮಿಟೆಡ್ ನ ಮ್ಯಾನೇಜಿಂಗ್ ಡೈರೆಕ್ಟರ್ ಸಂದೀಪ್ ಜಜೊಡಿಯ ಅವರು ಅಸೋಚಾಂನ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಸುನೀಲ್ ಕನೋರಿಯಾ ಅವರ ಉತ್ತರಾಧಿಕಾರಿಯಾಗಿ ಸೇವೆ ನಿರ್ವಹಿಸಲಿದ್ದಾರೆ.

85. 2017 ಬ್ರಿಕ್ಸ್ ಶೃಂಗಸಭೆಯ ಅತಿಥ್ಯ ವಹಿಸಲಿರುವ ದೇಶ ______________?

ಅ) ಚೀನಾ

ಆ) ಬ್ರೆಜಿಲ್

ಇ) ದಕ್ಷಿಣ ಆಫ್ರಿಕಾ

ಈ) ರಷ್ಯಾ

ಚೀನಾ

9ನೇ ಬ್ರಿಕ್ಸ್ ಶೃಂಗಸಭೆ ಚೀನಾದ ಕ್ಸಿಯಮೆನ್ ನಲ್ಲಿ ಸೆಪ್ಟೆಂಬರ್ 2017 ರಲ್ಲಿ ನಡೆಯಲಿದೆ. "ಬ್ರಿಕ್ಸ್: ಸ್ಟ್ರಾಂಗರ್ ಪಾರ್ಟನರ್ ಷಿಪ್ ಫಾರ್ ಎ ಬ್ರೈಟರ್ ಫ್ಯೂಚರ್" ಶೃಂಗಸಭೆಯ ಧ್ಯೇಯವಾಕ್ಯ.

86. 2017 ಗ್ರ್ಯಾಮಿ ಪ್ರಶಸ್ತಿಯಲ್ಲಿ ಬೆಸ್ಟ್ ಗ್ಲೋಬಲ್ ಮ್ಯೂಸಿಕ್ ಗ್ರ್ಯಾಮಿ ಪ್ರಶಸ್ತಿಯನ್ನು ಪಡೆದುಕೊಂಡ ಭಾರತೀಯ ಮೂಲದ ಅಮೆರಿಕ ಸಂಗೀತಗಾರ ಯಾರು?

ಅ) ಸಂದೀಪ್ ದಾಸ್

ಆ) ಸುಚೇಂದ್ರ ಗುಪ್ತಾ

ಇ) ಅರವಿಂದ್

ಈ) ಮಧುಕರ್ ನಾಯಕ್

ಸಂದೀಪ್ ದಾಸ್

www.karunaduexams.com

ಖ್ಯಾತ ತಬಲಾ ವಾದಕ ಸಂದೀಪ್ ದಾಸ್ ಅವರು ಪ್ರತಿಷ್ಠೆಯ ಗ್ರ್ಯಾಮಿ ಪ್ರಶಸ್ತಿಯನ್ನು ಜಯಿಸಿದ್ದಾರೆ. ಸಂದೀಪ್ ದಾಸ್ ಅವರು ತಮ್ಮ ಸಿಲ್ಕ್ ರೋಡ್ ಎನ್ಸೆಂಬಲ್ ತಂಡದೊಂದಿಗೆ ಬೆಸ್ಟ್ ಗ್ಲೋಬಲ್ ಮ್ಯೂಸಿಕ್ ಗ್ರ್ಯಾಮಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

87. ಭಾರತದ ಮೊದಲ ತೇಲುವ ಪ್ರಾಥಮಿಕ ಶಾಲೆಯನ್ನು ಯಾವ ರಾಜ್ಯದಲ್ಲಿ ಆರಂಭಿಸಲಾಯಿತು?

ಅ) ಮಣಿಪುರ

ಆ) ಸಿಕ್ಕಿಂ

ಇ) ಕೇರಳ

ಈ) ಅಸ್ಸಾಂ

ಮಣಿಪುರ

ಮಣಿಪುರದಲ್ಲಿ ದೇಶದ ಮೊದಲ ತೇಲುವ ಪ್ರಾಥಮಿಕ ಶಾಲೆಯನ್ನು ತೆರೆಯಲಾಗಿದೆ. ಲೋಕ್ತಕ್ ಸರೋವರ ಮೀನುಗಾರರ ಒಕ್ಕೂಟ ಹಾಗೂ ಪೀಪಲ್ ರಿಸೋರ್ಸ್ ಡೆವೆಲಪ್ಮೆಂಟ್ ಅಸೋಸಿಯೇಷನ್ ಎನ್ಜಿಒ ಈ ಶಾಲೆಯನ್ನು ಆರಂಭಿಸಿದೆ.

88. “Army and Nation: The Military and Indian Democracy since Independence” ಪುಸ್ತಕದ ಲೇಖಕರು ________?

ಅ) ಸುನೀಲ್ ಲಂಬಾ

ಆ) ವಿ. ಕೆ. ಸಿಂಗ್

ಇ) ಸ್ಟೆವೆನ್ ವಿಲ್ಕಿನ್ ಸನ್

ಈ) ಶಿವ ಕುನಲ್ ವರ್ಮಾ

ಸ್ಟೆವೆನ್ ವಿಲ್ಕಿನ್ ಸನ್

“Army and Nation: The Military and Indian Democracy since Independence” ಪುಸ್ತಕವನ್ನು ಯಾಲೆ ವಿಶ್ವವಿದ್ಯಾಲಯದ ಪ್ರೊಫೆಸರ್ ಸ್ಟೆವೆನ್ ವಿಲ್ಕಿನ್ ಸನ್ ಅವರು ಬರೆದಿದ್ದಾರೆ.

www.karunaduexams.com

89. ಪಾಕಿಸ್ತಾನದ ಮೊದಲ ಮಹಿಳಾ ವಿದೇಶಾಂಗ ಕಾರ್ಯದರ್ಶಿಯಾಗಿ ಈ ಮುಂದಿನ ಯಾರು ನೇಮಕಗೊಂಡಿದ್ದಾರೆ?

ಅ) ಬೆನಿಜಿರ್ ಖಾನ್

ಆ) ತೆಹ್ಮಿನಾ ಜಾಂಜುವಾ

ಇ) ಬಹಮೀನ್ ಶರೀಫ್

ಈ) ಶಬೀನಾ ಜಾಂಜುವಾ

ತೆಹ್ಮಿನಾ ಜಾಂಜುವಾ

ಪಾಕಿಸ್ತಾನದ ಹೊಸ ವಿದೇಶಾಂಗ ಕಾರ್ಯದರ್ಶಿಯಾಗಿ ಅಂಬಾಸಡರ್ ಮತ್ತು ವಿಶ್ವಸಂಸ್ಥೆಯಲ್ಲಿ ಪಾಕ್ನ ಖಾಯಂ ಪ್ರತಿನಿಧಿಯಾಗಿರುವ ತೆಹ್ಮಿನಾ ಜಾಂಜುವಾ ಅವರು ನೇಮಕಗೊಂಡಿದ್ದಾರೆ. ತೆಹ್ಮಿನಾ ಜಾಂಜುವಾ ಪಾಕ್ ನ ಮೊದಲ ಮಹಿಳಾ ವಿದೇಶಾಂಗ ಕಾರ್ಯದರ್ಶಿಯಾಗಿದ್ದಾರೆ. ಇಝಾಝ್ ಅಹ್ಮದ್ ಚೌಧರಿ ಅವರ ಸ್ಥಾನಕ್ಕೆ ತೆಹ್ಮಿನಾ ನೇಮಕಗೊಂಡಿದ್ದಾರೆ. ಅಹ್ಮದ್ ಚೌಧರಿ ಅವರು ವಿಶ್ವಸಂಸ್ಥೆಯ ಹೊಸ ಅಂಬಾಸಡರ್ ಆಗಿ ಅಧಿಕಾರ ವಹಿಸಿಕೊಂಡಿದ್ದಾರೆ. ತೆಹ್ಮಿನಾ ವಿದೇಶಾಂಗ ಸೇವಾ ಅಧಿಕಾರಿಯಾಗಿ 32 ವರ್ಷಗಳ ಅನುಭವ ಹೊಂದಿದ್ದಾರೆ. ಅವರು ಇಟಲಿ ಅಂಬಾಸಡರ್ ಆಗಿ 2011ರಿಂದ 2015ರ ತನಕ ಸೇವೆ ಸಲ್ಲಿಸಿದ್ದರು. 2011ರಲ್ಲಿ ವಿದೇಶಾಂಗ ಸಚಿವಾಲಯದ ಅಧಿಕೃತ ವಕ್ತಾರೆ ಆಗಿ ಸೇವೆ ಸಲ್ಲಿಸಿದ್ದರು. ತೆಹ್ಮಿನಾ ಅವರು ಇಸ್ಲಾಮಾಬಾದ್ ಮತ್ತು ಕೊಲಂಬಿಯಾ ವಿವಿಯಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

90. ಭಾರತದ ಮೊದಲ ನಗದು ರಹಿತ ಟೌನ್ ಷಿಪ್ ಎನಿಸಿರುವ GNFC ಟೌನ್ ಪಿಪ್ ಯಾವ ರಾಜ್ಯದಲ್ಲಿದೆ?

ಅ) ರಾಜಸ್ತಾನ

ಆ) ಗುಜರಾತ್

ಇ) ಮಧ್ಯ ಪ್ರದೇಶ

ಈ) ಮಹಾರಾಷ್ಟ್ರ

ಗುಜರಾತ್

ಗುಜರಾತ್ ನರ್ಮದಾ ವ್ಯಾಲಿ ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್ (GNFC) ಟೌನ್ ಷಿಪ್ ದೇಶದ ಮೊದಲ ನಗದು ರಹಿತ ಟೌನ್ ಷಿಪ್ ಎಂಬ ಗೌರವವಕ್ಕೆ ಪಾತ್ರವಾಗಿದೆ. ಗುಜರಾತ್ ಮುಖ್ಯಮಂತ್ರಿ ವಿಜಯ್ ರೂಪಾಣಿ ಅವರು

www.karunaduexams.com

ಫೆಬ್ರವರಿ13, 2017 ರಂದು ಉದ್ಘಾಟಿಸಿದರು. ಇಲ್ಲಿನ ಎಲ್ಲಾ ಅಂಗಡಿಗಳು ತಮ್ಮ ವ್ಯವಹಾರವನ್ನು ನಗದು ರಹಿತವಾಗಿ ನಡೆಸುತ್ತಿವೆ.

91. ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ ಯಾವ ರಾಕೆಟ್ ಮೂಲಕ 104 ಉಪಗ್ರಹಗಳನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿ ದಾಖಲೆ ಬರೆಯಿತು?

ಅ) ಪಿಎಸ್‌ಎಲ್ ವಿ-ಸಿ 37

ಆ) ಪಿಎಸ್‌ಎಲ್ ವಿ-ಸಿ 38

ಇ) ಪಿಎಸ್‌ಎಲ್ ವಿ-ಸಿ 40

ಈ) ಪಿಎಸ್‌ಎಲ್ ವಿ-ಸಿ 36

ಪಿಎಸ್‌ಎಲ್ ವಿ-ಸಿ 37

ಒಂದೇ ರಾಕೆಟ್ ನಿಂದ 104 ಉಪಗ್ರಹಗಳನ್ನು ಉಡಾವಣೆ ಮಾಡುವ ಮೂಲಕ ಭಾರತದ ಬಾಹ್ಯಾಕಾಶ ಸಂಸ್ಥೆ ಇಸ್ರೋ ಇಂದು ಐತಿಹಾಸಿಕ ಸಾಧನೆ ಮಾಡಿದೆ. ಆಂಧ್ರಪ್ರದೇಶದ ಶ್ರೀಹರಿ ಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಬೆಳಗ್ಗೆ 9.28ರ ಹೊತ್ತಿಗೆ 104ಉಪಗ್ರಹಗಳನ್ನು ಹೊತ್ತು ಪಿಎಸ್‌ಎಲ್ ವಿ -ಸಿ37ರಾಕೆಟ್ ನಭಕ್ಕೆ ಹಾರಿದೆ. 104 ಉಪಗ್ರಹಗಳ ಪೈಕಿ ಭಾರತದ ಕಾರ್ಟೋಸ್ಯಾಟ್-2, ಐಎನ್‌ಎಸ್-1ಎ ಹಾಗೂ ಐಎನ್‌ಎಸ್-1ಬಿ ಸೇರಿದಂತೆ ಮೂರು ಉಪಗ್ರಹಗಳು. ಅಮೆರಿಕದ 88 ಚಿಕ್ಕ ಉಪಗ್ರಹ(ಕ್ಯೂಬ್ಯಾ ಟ್)ಗಳು ಕಕ್ಷೆ ಸೇರಿದೆ. ಅಮೆರಿಕ, ಜರ್ಮನಿ, ಇಸ್ರೇಲ್, ಯುಎಇ, ಹಾಲೆಂಡ್, ಬೆಲ್ಜಿಯಂ ಸೇರಿದಂತೆ ವಿದೇಶದ 101 ವಾಣಿಜ್ಯ ಉದ್ದೇಶಿತ ಉಪಗ್ರಹಗಳು ಒಳಗೊಂಡಿವೆ.

92. 2017 ಭಾರತೀಯ ಪನೋರಮಾ ಸಿನಿಮಾ ಉತ್ಸವ ಯಾವ ನಗರದಲ್ಲಿ ನಡೆಯಲಿದೆ?

ಅ) ಪೋರ್ಟ್ ಬ್ಲೇರ್

ಆ) ಪಣಜಿ

ಇ) ಕಲ್ಕತ್ತಾ

ಈ) ಪುಣೆ

ಪೋರ್ಟ್ ಬ್ಲೇರ್

www.karunaduexams.com

ಅಂಡಮಾನಿನ ಪೋರ್ಟ್ ಬ್ಲೇರ್ ನಲ್ಲಿ 2017 ಭಾರತೀಯ ಪನೋರಮಾ ಸಿನಿಮಾ ಉತ್ಸವ ಫೆಬ್ರವರಿ 15 ರಿಂದ ಆರಂಭಗೊಂಡಿದೆ. ಐದು ದಿನಗಳ ಕಾಲ ಈ ಸಿನಿಮೋತ್ಸವ ನಡೆಯಲಿದೆ. ವಿವಿಧ ಭಾಷೆಯ 15ಕ್ಕೂ ಹೆಚ್ಚು ಜನಪ್ರಿಯ ಸಿನಿಮಾಗಳನ್ನು ಪ್ರದರ್ಶಿಸಲಾಗುವುದು.

93. ಗಣಿಗಾರಿಕೆಯಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ ಕೇಂದ್ರ ಸರ್ಕಾರ ಯಾವ ಪೋರ್ಟಲ್ ಅನ್ನು ಜಾರಿಗೆ ತಂದಿದೆ?

ಅ) Tamra

ಆ) Taboo

ಇ) Tani

ಈ) Tanra

Tamra

ಗಣಿಗಾರಿಕೆಯಲ್ಲಿ ಪಾರದರ್ಶಕತೆಯನ್ನು ಕಾಪಾಡುವ ಸಲುವಾಗಿ ಕೇಂದ್ರ ಸರ್ಕಾರ TAMRA ಹೆಸರಿನ ಮೊಬೈಲ್ ಅಪ್ಲಿಕೇಷನ್ ಹಾಗೂ ಪೋರ್ಟಲ್ ಅನ್ನು ಜಾರಿಗೆ ತಂದಿದೆ. TAMRA ಎಂದರೆ Transparency Auction Monitoring and Resource Augmentation.

94. 2017 ಕಾಯಕಲ್ಪ ಪ್ರಶಸ್ತಿಯಡಿ ನೈರ್ಮಲ್ಯ ಹಾಗೂ ಸ್ವಚ್ಚತೆ ವಿಭಾಗದಡಿ ಮೊದಲ ಪ್ರಶಸ್ತಿಯನ್ನು ಪಡೆದುಕೊಂಡ ಭಾರತೀಯ ಆರೋಗ್ಯ ಸಂಸ್ಥೆ ಯಾವುದು?

ಅ) AIIMS, ನವ ದೆಹಲಿ

ಆ) NIMANS, ಬೆಂಗಳೂರು

ಇ) NITRD, ನವ ದೆಹಲಿ

ಈ) PGIMER, ಚಂಡೀಗರ್

AIIMS, ನವ ದೆಹಲಿ

ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ನವದೆಹಲಿ 2017 ಕಾಯಕಲ್ಪ ಪ್ರಶಸ್ತಿಯಡಿ ನೈರ್ಮಲ್ಯ ಹಾಗೂ ಸ್ವಚ್ಚತೆ ವಿಭಾಗದಡಿ ಮೊದಲ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಪ್ರಶಸ್ತಿಯು ರೂ 5 ಕೋಟಿ ನಗದು ಬಹುಮಾನವನ್ನು ಒಳಗೊಂಡಿದೆ. ನೈರ್ಮಲ್ಯ ಹಾಗೂ ಸ್ವಚ್ಚತೆಯ ನಿರ್ವಹಣೆಗಾಗಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

www.karunaduexams.com

95. ಇತ್ತೀಚೆಗೆ ನಿಧನರಾದ “ಟಿ ವಿ ಪರಶುರಾಮ್” ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಸಿನಿಮಾ

ಆ) ವಿಜ್ಞಾನ

ಇ) ಪತ್ರಿಕೋದ್ಯಮ

ಈ) ಕಲೆ

ಪತ್ರಿಕೋದ್ಯಮ

ಹಿರಿಯ ಪತ್ರಕರ್ತ ಟಿ ವಿ ಪರಶುರಾಮ್ ಅಮೆರಿಕದಲ್ಲಿ ನಿಧನರಾದರು. ಪರಶುರಾಮ್ ಅವರು ವಿಶ್ವಸಂಸ್ಥೆಯಲ್ಲಿ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾದ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದ್ದರು. ಪರಶುರಾಮ್ ಅವರು ವಿವಿಧ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದರು. ಪತ್ರಕರ್ತನಲ್ಲದೇ ಪುಸ್ತಕಗಳನ್ನು ಸಹ ಬರೆದಿದ್ದಾರೆ.

96. ಈ ಕೆಳಗಿನ ಯಾವ ಅಂತಾರಾಷ್ಟ್ರೀಯ ಸಂಸ್ಥೆ ಭಾರತದಲ್ಲಿ ಇತ್ತೀಚೆಗೆ “South Asia Regional Training and Technical Assistance Center (SARTTAC)” ಕೇಂದ್ರವನ್ನು ಸ್ಥಾಪಿಸಿದೆ?

ಅ) ಅಂತಾರಾಷ್ಟ್ರೀಯ ಹಣಕಾಸು ನಿಧಿ

ಆ) ವಿಶ್ವಸಂಸ್ಥೆ

ಇ) ಐರೋಪ್ಯ ಒಕ್ಕೂಟ

ಈ) ಏಷ್ಯಾ ಅಭಿವೃದ್ಧಿ ಬ್ಯಾಂಕ್

ಅಂತಾರಾಷ್ಟ್ರೀಯ ಹಣಕಾಸು ನಿಧಿ

ಅಂತಾರಾಷ್ಟ್ರೀಯ ಹಣಕಾಸು ನಿಧಿ ನವದೆಹಲಿಯಲ್ಲಿ “South Asia Regional Training and Technical Assistance Center (SARTTAC)” ಕೇಂದ್ರವನ್ನು ಸ್ಥಾಪಿಸಿದೆ. ದಕ್ಷಿಣ ಏಷ್ಯಾದಲ್ಲಿ ಆರ್ಥಿಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಐಎಂಎಫ್ ಹಾಗೂ ಸದಸ್ಯ ರಾಷ್ಟ್ರಗಳಾದ ಬಾಂಗ್ಲದೇಶ, ಭೂತಾನ್, ಮಾಲ್ಡೀವ್ಸ್, ನೇಪಾಳ ಮತ್ತು ಶ್ರೀಲಂಕಾ ರಾಷ್ಟ್ರಗಳ ಸಹಯೋಗದಲ್ಲಿ ಇದನ್ನು ಸ್ಥಾಪಿಸಲಾಗಿದೆ.

www.karunaduexams.com

97. ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಯ ಅಧೀನ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ “ಜೀನ್ ಪಿಯರ್ ಲ್ಯಾಕ್ರೊಯಾಕ್ಸ್” ಯಾವ ದೇಶದವರು?

ಅ) ಜಪಾನ್

ಆ) ಫ್ರಾನ್ಸ್

ಇ) ಜರ್ಮನಿ

ಈ) ಸ್ಪೇನ್

ಫ್ರಾನ್ಸ್

ಫ್ರಾನ್ಸ್ ನ ಜೀನ್ ಪಿಯರ್ ಲ್ಯಾಕ್ರೊಯಾಕ್ಸ್ ರವರು ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಯ ಅಧೀನ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

98. ಕ್ರೀಡಾ ಶ್ರೇಷ್ಠತೆಗಾಗಿ ಗೌರವ ಪದವಿಯನ್ನು ಪಡೆದ ಸಂದೀಪ್ ಸಿಂಗ್ ಅವರು ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಕ್ರಿಕೆಟ್

ಆ) ಹಾಕಿ

ಇ) ಪುಟ್ಬಾಲ್

ಈ) ಟೆನ್ನಿಸ್

ಹಾಕಿ

ಭಾರತದ ವೃತ್ತಿಪರ ಹಾಕಿ ಆಟಗಾರ ಹಾಗೂ ಹಾಕಿ ತಂಡದ ಮಾಜಿ ನಾಯಕ ಸಂದೀಪ್ ಸಿಂಗ್ ಅವರು ಕ್ರೀಡಾ ಶ್ರೇಷ್ಠತೆಗಾಗಿ ಗೌರವ ಪದವಿಯನ್ನು ಪಡೆದುಕೊಂಡಿದ್ದಾರೆ. ಆ ಮೂಲಕ ಈ ಗೌರವವನ್ನು ಪಡೆದ ಭಾರತದ ಎರಡನೇ ಕ್ರೀಡಾಪಟು. ಪಂಜಾಬ್ ನ ದೇಶ್ ಭಗತ್ ಖಾಸಗಿ ವಿಶ್ವವಿದ್ಯಾಲಯ ಇವರಿಗೆ ಪದವಿಯನ್ನು ನೀಡಿ ಗೌರವಿಸಿದೆ. ಈ ಹಿಂದೆ ದಿಲೀಪ್ ಟಿರ್ಕೆ ಅವರಿಗೆ ಸಂಬಲಪುರ್ ವಿಶ್ವವಿದ್ಯಾಲಯದಿಂದ ಗೌರವ ಪದವಿಯನ್ನು ನೀಡಿ ಗೌರವಿಸಿತ್ತು.

99. ವಿಶ್ವ ಚೆಸ್ ಫೆಡರೇಷನ್ ನ “ಕ್ಯಾಂಡಿಡೇಟ್ ಮಾಸ್ಟರ್” ಗೌರವಕ್ಕೆ ಪಾತ್ರರಾದ ಭಾರತದ ಚೆಸ್ ಆಟಗಾರ ಯಾರು?

ಅ) ಕುಶ್ ಭಗತ್

ಆ) ಸಪ್ತರ್ಷಿ ರಾಯ್

ಇ) ಸುಂದರ್ ಎಂ ಶ್ಯಾಮ್

ಈ) ನಿರಂಜನ್

ಕುಶ್ ಭಗತ್

ಕುಶ್ ಭಗತ್, ಹಿಲ್ ಸ್ಪ್ರಿಂಗ್ ಅಂತಾರಾಷ್ಟ್ರೀಯ ಶಾಲೆಯ ದ್ವಿತೀಯ ಪಿಯು ವಿದ್ಯಾರ್ಥಿ ಅವರಿಗೆ ವಿಶ್ವ ಚೆಸ್ ಫೆಡರೇಷನ್ ನ “ಕ್ಯಾಂಡಿಡೇಟ್ ಮಾಸ್ಟರ್ (Candidate Master)” ಗೌರವ ಲಭಿಸಿದೆ.

100. 2017 ಬ್ರಿಟನ್ ಶೌರ್ಯ ಪ್ರಶಸ್ತಿಗೆ ಭಾಜನರಾಗಿರುವ ಭಾರತ ಮೂಲದ ಅಧಿಕಾರಿ ಯಾರು?

ಅ) ಹುಸೇನ್ ಭಾಷ

ಆ) ಶಾಂದ್ ಪನೇಸರ್

ಇ) ಸುರ್ಜಿತ್ ಸಿಂಗ್

ಈ) ಬಾಲಾಜಿ ವರ್ಮಾ

ಶಾಂದ್ ಪನೇಸರ್

ಬೆಂಕಿ ಹೊತ್ತಿ ಉರಿಯುತ್ತಿರುವ ಮನೆಯೊಂದರಿಂದ ತಮ್ಮ ಜೀವದ ಹಂಗು ತೊರೆದು ಇಬ್ಬರನ್ನು ರಕ್ಷಿಸಿದ ಭಾರತ ಮೂಲದ ಸ್ಕಾಟ್ಲೆಂಡ್ ಯಾರ್ಡ್ ಅಧಿಕಾರಿಯೊಬ್ಬರಿಗೆ ಬ್ರಿಟನ್‌ನ ಶೌರ್ಯ ಪ್ರಶಸ್ತಿ ದೊರೆತಿದೆ. ಪೊಲೀಸ್ ಅಧಿಕಾರಿಗಳಾದ ಶಾಂದ್ ಪನೇಸರ್ ಮತ್ತು ಅವರ ಸಹೋದ್ಯೋಗಿ ಕ್ರೇಗ್ ನಿಕೊಲ್ಸನ್ ಅವರು ಜಂಟಿಯಾಗಿ ಈ ಪ್ರಶಸ್ತಿ ಪಡೆದಿದ್ದಾರೆ.

www.karunaduexams.com

101. “2017 ಲಾರೆಸ್ ವರ್ಷದ ಕ್ರೀಡಾಪಟು ಪ್ರಶಸ್ತಿ” ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ಕ್ರಮವಾಗಿ ಯಾರಿಗೆ ಲಭಿಸಿದೆ?

ಅ) ಉಸೇನ್ ಬೋಲ್ಟ್ ಮತ್ತು ಸಿಮೋನ್ ಬೈಲ್ಸ್

ಆ) ಕ್ರಿಸ್ಟಿಯಾನೊ ರೊನಾಲ್ಡೊ ಮತ್ತು ಸಿಮೋನ್ ಬೈಲ್ಸ್

ಇ) ಲೆಬ್ರೊನ್ ಜೇಮ್ಸ್ ಮತ್ತು ಸೆರೆನಾ ವಿಲಿಯಮ್ಸ್

ಈ) ಲಿಯೊನೆಲ್ ಮೆಸ್ಸಿ ಮತ್ತು ಪಿ ವಿ ಸಿಂಧು

ಉಸೇನ್ ಬೋಲ್ಟ್ ಮತ್ತು ಸಿಮೋನ್ ಬೈಲ್ಸ್

ಫುಟ್ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ಮತ್ತು ಲೆಬ್ರೋನ್ ಜೇಮ್ಸ್ ಅವರನ್ನು ಹಿಂದಕ್ಕಿದ ಸ್ಪ್ರಿಂಟ್ ಕಿಂಗ್ ಉಸೇನ್ ಬೋಲ್ಟ್ ಅವರು ಲಾರೆಸ್ ವರ್ಷದ ಶ್ರೇಷ್ಠ ಕ್ರೀಡಾ ತಾರೆ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅವರು ದಾಖಲೆ ಸಮಬಲದ ನಾಲ್ಕನೇ ಬಾರಿ ಈ ಪ್ರಶಸ್ತಿಯಿಂದ ಪುರಸ್ಕೃತ ಗೊಂಡಿದ್ದಾರೆ. ಜಿಮ್ನಾಸ್ಟ್ ಸಿಮೋನ್ ಬೈಲ್ಸ್ ಶ್ರೇಷ್ಠ ವನಿತಾ ಕ್ರೀಡಾತಾರೆ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

102. “Hema Malini: Beyond the Dream Girl” ಪುಸ್ತಕದ ಲೇಖಕರು __________?

ಅ) ರಾಮ್ ಕಮಲ್ ಮುಖರ್ಜಿ

ಆ) ಆಶಾ ಕಿರಣ್

ಇ) ಶತ್ರುಘ್ನ ಸಿನ್ಹಾ

ಈ) ಅಮರಿಂದರ್ ಗುಪ್ತಾ

ರಾಮ್ ಕಮಲ್ ಮುಖರ್ಜಿ

ಲೇಖಕ ಹಾಗೂ ಅಂಕಣಕಾರ ರಾಮ್ ಕಮಲ್ ಮುಖರ್ಜಿ ಅವರು “Hema Malini: Beyond the Dream Girl” ಪುಸ್ತಕದ ಲೇಖಕರು.

www.karunaduexams.com

103. 2017 ರಾಷ್ಟ್ರೀಯ ಯಶ್ ಚೋಪ್ರಾ ಸ್ಮರಣಾರ್ಥ ಪ್ರಶಸ್ತಿಗೆ ಯಾರನ್ನು ಆಯ್ಕೆ ಮಾಡಲಾಗಿದೆ?

ಅ) ಶಾರೂಖ್ ಖಾನ್

ಆ) ಅಮೀರ್ ಖಾನ್

ಇ) ಸಂಜಯ್ ದತ್ತ್

ಈ) ಅಕ್ಷಯ್ ಕುಮಾರ್

ಶಾರೂಖ್ ಖಾನ್

4ನೇ ರಾಷ್ಟ್ರೀಯ ಯಶ್ ಚೋಪ್ರಾ ಸ್ಮರಣಾರ್ಥ ಪ್ರಶಸ್ತಿಗೆ ಶಾರೂಖ್ ಖಾನ್ ಅವರನ್ನು ಆಯ್ಕೆಮಾಡಲಾಗಿದೆ.

104. ಮಲೇಷಿಯಾ ಮಾಸ್ಟರ್ಸ್ ಗ್ರಾಂಡ್ ಪ್ರಿಕ್ಸ್ ಗೋಲ್ಡ್-2017 ನಲ್ಲಿ ಪ್ರಶಸ್ತಿಯನ್ನು ಗೆದ್ದವರು ಯಾರು?

ಅ) ಪಿ ವಿ ಸಿಂಧು

ಆ) ಸೈನಾ ನೆಹ್ವಾಲ್

ಇ) ಪಾವೀ ಚೊಚುವಾಂಗ್

ಈ) ಕಾರ್ಲ್ ಫ್ರಾನ್ಸಿಸ್

ಸೈನಾ ನೆಹ್ವಾಲ್

ಮಲೇಷಿಯಾ ಮಾಸ್ಟರ್ಸ್ ಗ್ರಾಂಡ್ ಪ್ರಿಕ್ಸ್ ಗೋಲ್ಡ್ ಅಂತಿಮ ಪಂದ್ಯದಲ್ಲಿ ಭಾರತದ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಅವರು ಥಾಲ್ಯಾಂಡ್ ನ 18 ವರ್ಷದ ಪೋರ್ನ್ ಪಾವೀ ಚೊಚುವಾಂಗ್ ಅವರನ್ನು 46 ನಿಮಿಷಗಳ ಆಟದಲ್ಲಿ 22-2-, 22-20 ಸೆಟ್ ಗಳಿಂದ ಮಣಿಸಿದರು.

105. ಈ ಕೆಳಗಿನ ಯಾವುದು ಭಾರತದಲ್ಲಿ 2017ರಲ್ಲಿ ನಡೆಯಲಿರುವ ಫಿಫಾ ಅಂಡರ್-17 ವಿಶ್ವಕಪ್ಗೆ ಟೂರ್ನಮೆಂಟ್ನ ಅಧಿಕೃತ ಲಾಂಛನವಾಗಿದೆ?

ಅ) ಖೇಲೋ ಚೀತಾ

ಆ) ಹಾರುವ ಚಿಟ್ಟೆ

ಇ) ರಾಜಹಂಸ

ಈ) ಸಾರಂಗ

www.karunaduexams.com

ಖೇಲೋ ಚೀತಾ

ಭಾರತದಲ್ಲಿ 2017ರಲ್ಲಿ ನಡೆಯಲಿರುವ ಫಿಫಾ ಅಂಡರ್-17 ವಿಶ್ವಕಪ್ಗೆ 'ಖೇಲೋ' ಚೀತಾವನ್ನು ಟೂರ್ನಮೆಂಟ್ನ ಅಧಿಕೃತ ಲಾಂಛನವಾಗಿ ಶುಕ್ರವಾರ ಅನಾವರಣಗೊಳಿಸಲಾಗಿದೆ. ಅಂಡರ್-17 ವಿಶ್ವಕಪ್ ಭಾರತದಲ್ಲಿ ಅಕ್ಟೋಬರ್ 6 ರಿಂದ 28ರ ತನಕ ನಡೆಯಲಿದ್ದು, ಟೂರ್ನಮೆಂಟ್ನ ಡ್ರಾ ಪ್ರಕ್ರಿಯೆ 2017ರ ಜು.7ರಂದು ಕೋಲ್ಕತಾದಲ್ಲಿ ನಡೆಯಲಿರುವುದು. ಟೂರ್ನಿಯು ಕೋಲ್ಕತಾ, ಗುವಾಹಟಿ, ಕೊಚ್ಚಿ, ನವಿ ಮುಂಬೈ, ಗೋವಾ ಹಾಗೂ ಹೊಸದಿಲ್ಲಿಯಲ್ಲಿ ನಡೆಯಲಿದೆ. ಈ ತಾಣಗಳಲ್ಲಿ ವಿಶ್ವದಾದ್ಯಂತ ಆಟಗಾರರು ಆಡಲಿದ್ದಾರೆ.

106. ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡವರು ಯಾರು?

ಅ) ಓ ಪನ್ನೀರುಸೆಲ್ವಂ

ಆ) ಕೆ ಪಳನಿಸ್ವಾಮಿ

ಇ) ಶಶಿಕಲಾ ನಟರಾಜನ್

ಈ) ಮರಿಯಪ್ಪನ್

ಕೆ ಪಳನಿಸ್ವಾಮಿ

ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರು ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಸಿ ವಿದ್ಯಾಸಾಗರ್ ರಾವ್ ಅವರು ಪಳನಿಸ್ವಾಮಿ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

107. "Oh My Gods" ಪುಸ್ತಕದ ಲೇಖಕರು___________?

ಅ) ಮನೀಷ್ ಜೆಟ್ಲಿ

ಆ) ಅರುಣ್ ಜೆಟ್ಲಿ

ಇ) ರಾಮಚಂದ್ರ ಗುಹಾ

ಈ) ಮನೋಹರ್ ಪಣಿಕ್ಕರ್

ನಿವೃತ್ತ ಲೆಫ್ಟಿನೆಂಟ್ ಮನೀಷ್ ಜೆಟ್ಲಿ ಅವರು "ಓ ಮೈ ಗಾಡ್ಸ್" ಪುಸ್ತಕದ ಲೇಖಕರು.

www.karunaduexams.com

108. “2017 ಬ್ರಾಂಡ್ ಲಾರಿಯೆಟ್ ಲೆಜೆಂಡರಿ (Brand Laureate Legendary)” ಪ್ರಶಸ್ತಿ ಯಾರಿಗೆ ಲಭಿಸಿದೆ?

ಅ) ಲತಾ ಮಂಗೇಶ್ಕರ್

ಆ) ಆಶಾ ಬೋಸ್ಲೆ

ಇ) ಚಿತ್ರಾ

ಈ) ನೀತು ಅಂಬಾನಿ

ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಅವರನ್ನು ಬ್ರಾಂಡ್ ಲಾರಿಯೆಟ್ ಲೆಜೆಂಡರಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ವಿಶ್ವಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿರುವ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

109. 2017 ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ಯಾವ ದೇಶದಲ್ಲಿ ನಡೆಯಲಿದೆ?

ಅ) ಭಾರತ

ಆ) ಇಂಗ್ಲೆಂಡ್

ಇ) ಆಸ್ಟ್ರೇಲಿಯಾ

ಈ) ದಕ್ಷಿಣ ಆಫ್ರಿಕಾ

ಇಂಗ್ಲೆಂಡ್

2017 ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ಇಂಗ್ಲೆಂಡ್ ನಲ್ಲಿ 24ನೇ ಜೂನ್ ನಿಂದ 23ನೇ ಜುಲೈ ವರೆಗೆ ನಡೆಯಲಿದೆ.

110. ಈ ಕೆಳಗಿನ ಯಾವ ರಾಜ್ಯ ದಕ್ಷಿಣ ಏಷ್ಯಾ ಸ್ಪೀಕರ್ ಗಳ ಸಮಾವೇಶದ ಅತಿಥ್ಯವನ್ನು ವಹಿಸಲಿದೆ?

ಅ) ಮಧ್ಯ ಪ್ರದೇಶ

ಆ) ಕೇರಳ

ಇ) ಗುಜರಾತ್

ಈ) ಆಂಧ್ರ ಪ್ರದೇಶ

ಮಧ್ಯ ಪ್ರದೇಶ

ದಕ್ಷಿಣ ಏಷ್ಯಾ ಸ್ಪೀಕರ್ ಗಳ ಸಮಾವೇಶಕ್ಕೆ ಮಧ್ಯ ಪ್ರದೇಶದ ಇಂಧೋರ್ ನಲ್ಲಿ ಲೋಕ ಸಭಾ ಸ್ಪೀಕರ್ ಸುಮಿತ್ರಾ ಮಹಾಜನ್ ಅವರು ಚಾಲನೆ ನೀಡಿದರು. ಎರಡು ದಿನಗಳ ಕಾಲ ಈ ಸಮಾವೇಶ ನಡೆಯಲಿದೆ. ಆಫ್ಘಾನಿಸ್ತಾನ,

www.karunaduexams.com

ಬಾಂಗ್ಲದೇಶ, ಭೂತಾನ್, ಶ್ರೀಲಂಕಾ, ಮಾಲ್ಡೀವ್ಸ್ ಹಾಗೂ ಭಾರತದ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

111. ಈ ಕೆಳಗಿನ ಯಾರನ್ನು "2016 ವ್ಯಾಸ ಸಮ್ಮಾನ್ ಪ್ರಶಸ್ತಿ"ಗೆ ಆಯ್ಕೆಮಾಡಲಾಗಿದೆ?

ಅ) ಸುರೇಂದ್ರ ವರ್ಮಾ

ಆ) ಜಿ ಎಸ್ ಶಿವರುದ್ರಪ್ಪ

ಇ) ಸುನೀತಾ ಜೈನ್

ಈ) ಶಕುಂತಲಾ ಸಿಂಗ್

ಸುರೇಂದ್ರ ವರ್ಮಾ

ಪ್ರಸಿದ್ಧ ಹಿಂದಿ ಲೇಖಕ ಸುರೇಂದ್ರ ವರ್ಮಾ ಅವರನ್ನು 2016 ವ್ಯಾಸ ಸಮ್ಮಾನ್ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಸುರೇಂದ್ರ ವರ್ಮಾ ಅವರ ಕಾದಂಬರಿ "ಕಾತ್ನ ಶಮಿ ಕ ವೃಕ್ಷ: ಪದ್ಮ ಪಂಖುರಿ ಕಿ ಧರ್ ಸೆ" ಗೆ ಪ್ರಶಸ್ತಿ ಲಭಿಸಿದೆ.

112. "ಶರ್‌ಹೋಜೆಲಿ ಲೆಜಿಟ್ಸು" ಯಾವ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ?

ಅ) ಮಣಿಪುರ

ಆ) ಸಿಕ್ಕಿಂ

ಇ) ನಾಗಲ್ಯಾಂಡ್

ಈ) ತ್ರಿಪುರ

ನಾಗಲ್ಯಾಂಡ್

ನಾಗಲ್ಯಾಂಡ್ ಪೀಪಲ್ಸ್ ಫ್ರಂಟ್ ಅಧ್ಯಕ್ಷ ಶರ್‌ಹೋಜೆಲಿ ಲೆಜಿಟ್ಸು ಅವರನ್ನು ನೂತನ ಮುಖ್ಯಮಂತ್ರಿಯಾಗಿ ಸರ್ವಾನುಮತದಿಮದ ಆಯ್ಕೆ ಮಾಡಲಾಗಿದೆ. ಇದೇ 22ರಂದು ಲೆಜಿಟ್ಸು ಅವರು ನೂತನ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

www.karunaduexams.com

113. ಇತ್ತೀಚೆಗೆ ನಿಧನರಾದ ಮಾಜಿ ಸಂಸದ ಜಾಂಬುವಂತರಾವ್ ದೋತೆ ಯಾವ ಹೆಸರಿನಿಂದ ಪ್ರಖ್ಯಾತರಾಗಿದ್ದರು?

ಅ) ವಿದರ್ಭಾ ಸಿಂಹ

ಆ) ಮಹಾರಾಷ್ಟ್ರ ಕೇಸರಿ

ಇ) ವಿದರ್ಭಾ ಕೇಸರಿ

ಈ) ನಾಗಪುರ ಸಿಂಹ

ವಿದರ್ಭಾ ಸಿಂಹ

ವಿದರ್ಭಾ ವಿಶೇಷ ಸ್ಥಾನಮಾನಕ್ಕಾಗಿ ಹೋರಾಡಿದ್ದ ಮಾಜಿ ಸಂಸದ "ವಿದರ್ಭಾ ಸಿಂಹ" ಖ್ಯಾತಿಯ ಜಾಂಬುವಂತರಾವ್ ದೋತೆ ನಿಧನರಾಗಿದ್ದಾರೆ. ಅವರಿಗೆ 78 ವರ್ಷ ವಯಸ್ಸಾಗಿತ್ತು. ವಿದರ್ಭಾ ವಿಶೇಷ ಸ್ಥಾನಮಾನಕ್ಕಾಗಿ ಹೋರಾಡಿದ್ದ ಜಾಂಬುವಂತರಾವ್ ದೋತೆ ಅವರು 2002ರಲ್ಲಿ ವಿದರ್ಭಾ ಜನತಾ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸಿದ್ದರು. ಅಲ್ಲದೆ ನಾಗ್ಪುರದಿಂದ ಸ್ಪರ್ಧಿಸಿ ಗೆದ್ದು ಸಂಸದರೂ ಕೂಡ ಆಗಿದ್ದರು.

114. “2017 ರೊಟ್ಟರ್ಡಮ್ ಟೆನ್ನಿಸ್ ಟೂರ್ನಮೆಂಟ್” ಗೆದ್ದುಕೊಂಡ “ಜೊ ವಿಲ್ಫ್ರೆಡ್ ತ್ಸೊಂಗ” ಯಾವ ದೇಶದವರು?

ಅ) ಫ್ರಾನ್ಸ್

ಆ) ಬ್ರೆಜಿಲ್

ಇ) ಬೆಲ್ಜಿಯಂ

ಈ) ರಷ್ಯಾ

ಫ್ರಾನ್ಸ್

ಫ್ರಾನ್ಸ್ ನ “ಜೊ ವಿಲ್ಫ್ರೆಡ್ ತ್ಸೊಂಗ” ಅವರು 2017 ರೊಟ್ಟರ್ಡಮ್ ಟೆನ್ನಿಸ್ ಟೂರ್ನಮೆಂಟ್ ನಲ್ಲಿ ಡೇವಿಡ್ ಗೊಫಿನ್ ಅವರನ್ನು ಮಣಿಸಿ ಪ್ರಶಸ್ತಿಯನ್ನು ಗೆದ್ದುಕೊಂಡರು.

www.karunaduexams.com

115. "2017 ಆರ್ಥಿಕ ಸ್ವಾತಂತ್ರ್ಯ ಸೂಚ್ಯಂಕ" ದಲ್ಲಿ ಭಾರತ ಎಷ್ಟನೇ ಸ್ಥಾನವನ್ನು ಪಡೆದುಕೊಂಡಿದೆ?

ಅ) 133

ಆ) 143

ಇ) 96

ಈ) 105

143

2017 ಆರ್ಥಿಕ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತ 143ನೇ ಸ್ಥಾನವನ್ನು ಪಡೆದುಕೊಂಡಿದೆ. ಅಮೆರಿಕದ ಚಿಂತಕರ ಚಾವಡಿ "ದಿ ಹೆರಿಟೇಜ್ ಫೌಂಡೇಶನ್" ಈ ಸೂಚ್ಯಂಕವನ್ನು ಬಿಡುಗಡೆಗೊಳಿಸಿದೆ. ಈ ವರ್ಷದ ಸೂಚ್ಯಂಕದಲ್ಲಿ ಹಾಂಕಾಂಗ್ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ಸಿಂಗಪುರ ಮತ್ತು ನ್ಯೂಜಿಲ್ಯಾಂಡ್ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

116. 2017 ನ್ಯಾಷನ್ ಎಂಎಸ್ಎಂಇ ಎಕ್ಸಲೆನ್ಸ್ ಪ್ರಶಸ್ತಿಯನ್ನು ಪಡೆದುಕೊಂಡ ಸಾರ್ವಜನಿಕ ವಲಯದ ಬ್ಯಾಂಕ್ ಯಾವುದು?

ಅ) ಕಾರ್ಪೋರೇಶನ್ ಬ್ಯಾಂಕ್

ಆ) ಭಾರತೀಯ ಸ್ಟೇಟ್ ಬ್ಯಾಂಕ್

ಇ) ಕೆನರಾ ಬ್ಯಾಂಕ್

ಈ) ಸಿಂಡಿಕೇಟ್ ಬ್ಯಾಂಕ್

ಕಾರ್ಪೋರೇಶನ್ ಬ್ಯಾಂಕ್

ಮಂಗಳೂರು ಮೂಲದ ಕಾರ್ಪೋರೇಶನ್ ಬ್ಯಾಂಕ್ 2017 ನ್ಯಾಷನ್ ಎಂಎಸ್ಎಂಇ ಎಕ್ಸಲೆನ್ಸ್ ಪ್ರಶಸ್ತಿಯನ್ನು ಪಡೆದುಕೊಂಡಿದೆ.

www.karunaduexams.com

117. ಉನ್ನತ ಶಿಕ್ಷಣ ಹಣಕಾಸು ಏಜೆನ್ಸಿಯನ್ನು ಆರಂಭಿಸುವ ಸಲುವಾಗಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದೊಂದಿಗೆ ಯಾವ ಬ್ಯಾಂಕ್ ಒಪ್ಪಂದಕ್ಕೆ ಸಹಿ ಹಾಕಿದೆ?

ಅ) ಕೆನರಾ ಬ್ಯಾಂಕ್

ಆ) ವಿಜಯಾ ಬ್ಯಾಂಕ್

ಇ) ಭಾರತೀಯ ಸ್ಟೇಟ್ ಬ್ಯಾಂಕ್

ಈ) ಫೆಡರಲ್ ಬ್ಯಾಂಕ್

ಕೆನರಾ ಬ್ಯಾಂಕ್

ಉನ್ನತ ಶಿಕ್ಷಣ ಹಣಕಾಸು ಏಜೆನ್ಸಿಯನ್ನು ಆರಂಭಿಸುವ ಸಲುವಾಗಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದೊಂದಿಗೆ ಕೆನರಾ ಬ್ಯಾಂಕ್ ಒಪ್ಪಂದಕ್ಕೆ ಸಹಿ ಹಾಕಿದೆ. ಉನ್ನತ ಶಿಕ್ಷಣ ಹಣಕಾಸು ಏಜೆನ್ಸಿಯನ್ನು ಐಐಟಿ/ಐಐಎಂ/ಎನ್‌ಐಟಿ ಗಳಲ್ಲಿ ವಿಶ್ವ ದರ್ಜೆಯ ಲ್ಯಾಬ್ ಗಳನ್ನು ಅಭಿವೃದ್ಧಿಗೊಳಿಸಲು ಬಳಸಲಾಗುವುದು.

118. ಇತ್ತೀಚೆಗೆ ನಿಧನರಾದ ವೇದ ಪ್ರಕಾಶ್ ಅವರು ಯಾವ ಭಾಷೆಯ ಪ್ರಸಿದ್ಧ ಕಾದಂಬರಿಕಾರ?

ಅ) ಹಿಂದಿ

ಆ) ಉರ್ದು

ಇ) ಗುಜರಾತಿ

ಈ) ಮರಾಠಿ

ಹಿಂದಿ

ಖ್ಯಾತ ಹಿಂದಿ ಕಾದಂಬರಿಕಾರ ವೇದ್ಪ್ರಕಾಶ್ ಶರ್ಮ ಕೊನೆಯುಸಿರೆಳೆದರು. ಅವರಿಗೆ 62 ವರ್ಷ ವಯಸ್ಸಾಗಿತ್ತು. 176 ಕಾದಂಬರಿಗಳನ್ನು ಬರೆದಿದ್ದ ಅವರು, ಕೆಲವು ಹಿಂದಿ ಸಿನೆಮಾಗಳಿಗೆ ಸಾಹಿತ್ಯವನ್ನೂ ರಚಿಸಿದ್ದರು. ಉತ್ತರಪ್ರದೇಶದ ಮೀರತ್ನಲ್ಲಿ ಜನಿಸಿದ್ದ ಶರ್ಮ, ಆರಂಭದ ದಿನಗಳಲ್ಲಿ ಗುಪ್ತನಾಮದಲ್ಲಿ 23 ಕಾದಂಬರಿ ಬರೆದು ಪ್ರಕಟಿಸಿದ್ದರು. 1973ರಲ್ಲಿ ತಮ್ಮ 'ದಹೆಕ್ತೆ ಶಹರ್' ಕಾದಂಬರಿಯಿಂದ ಪ್ರಸಿದ್ಧಿಯನ್ನು ಪಡೆದರು. 'ಖೈದಿ ನಂ.100, ವರ್ದಿ ವಾಲಾ ಗೂಂಡ' ಮುಂತಾದ ಕಾದಂಬರಿಗಳು ಅತ್ಯಂತ ಹೆಚ್ಚು ಮಾರಾಟವಾದ ದಾಖಲೆಗೆ ಪಾತ್ರವಾಗಿದ್ದವು. ಆರಕ್ಕೂ ಹೆಚ್ಚು ಹಿಂದಿ ಸಿನೆಮಾಗಳಿಗೆ ಸಾಹಿತ್ಯ ರಚಿಸಿದ್ದು , ಇವರ 'ಬಹು ಮಾಂಗೆ ಇನ್ಸಾಫ್' ಕಾದಂಬರಿಯನ್ನು 1985ರಲ್ಲಿ ಹಿಂದಿಯಲ್ಲಿ ಸಿನೆಮಾ ಮಾಡಲಾಗಿತ್ತು. 1992ರ 'ಅನಾಮ್', 1995ರ 'ಸಬ್ಸೆ ಬಡಾ ಖಿಲಾಡಿ' ಸಿನೆಮಾದ ಕಥೆಗೆ ಇವರ ಕಾದಂಬರಿ

www.karunaduexams.com

ಮೂಲವಾಗಿತ್ತು. 1999ರಲ್ಲಿ ಬಿಡುಗಡೆಯಾದ 'ಇಂಟರ್ನ್ಯಾಷನಲ್ ಖಿಲಾಡಿ' ಸಿನೆಮಾದ ಸಾಹಿತ್ಯ ರಚನೆ ಇವರದಾಗಿತ್ತು. ಕೇಶವ ಪಂಡಿತ್ ಎಂಬ ಕಲ್ಪಿತ ವ್ಯಕ್ತಿತ್ವವನ್ನು ಆಧಾರವಾಗಿಟ್ಟುಕೊಂಡು ಹಲವಾರು ಕಾದಂಬರಿ ಮತ್ತು ಟಿವಿ ಧಾರಾವಾಹಿ ರಚಿಸಿದ್ದರು. 1992 ಮತ್ತು 94ರಲ್ಲಿ ಮೀರತ್ ರತ್ನ ಪ್ರಶಸ್ತಿ ಪಡೆದಿದ್ದರು.

119. ಬಾರನ್ ದ್ವೀಪ ಪ್ರದೇಶ ಯಾವ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿದೆ?

ಅ) ಅಂಡಮಾನ್ ಮತ್ತು ನಿಕೋಬರ್

ಆ) ಕೇರಳ

ಇ) ಅಸ್ಸಾಂ

ಈ) ಲಕ್ಷದ್ವೀಪ

ಅಂಡಮಾನ್ ಮತ್ತು ನಿಕೋಬರ್

ಅಂಡಮಾನ್ ರಾಜಧಾನಿ ಪೋರ್ಟ್ ಬ್ಲೇರ್ ನಿಂದ 140 ಕಿ.ಮೀ ಈಶಾನ್ಯ ಭಾಗದಲ್ಲಿ ಬಾರನ್ ದ್ವೀಪವಿದೆ. ಇತ್ತೀಚೆಗೆ ಇಲ್ಲಿನ ಜ್ವಾಲಾಮುಖಿ 150 ವರ್ಷಗಳ ಬಳಿಕ ಸಕ್ರಿಯವಾಗಿದ್ದು ಬೂದಿಯನ್ನು ಉಗುಳುತ್ತಿದೆ ಎಂದು ಗೋವಾದಲ್ಲಿರುವ ರಾಷ್ಟ್ರೀಯ ಸಾಗರ ವಿಜ್ಞಾನ ಸಂಸ್ಥೆಯ ತಜ್ಞರು ಹೇಳಿದ್ದಾರೆ. ಇದು ಭಾರತದ ಏಕೈಕ ಜ್ವಾಲಾಮುಖಿ ಆಗಿದೆ.

120. ಭಾರತದ ಮೊದಲ ಕ್ರೀಡಾ ಧ್ಯೇಯ ಆಧರಿತ ಸಾಹಿತ್ಯ ಉತ್ಸವ “SporTale” ಯಾವ ನಗರದಲ್ಲಿ ಆಯೋಜಿಸಲಾಗಿತ್ತು?

ಅ) ಪುಣೆ

ಆ) ಚೆನ್ನೈ

ಇ) ನವ ದೆಹಲಿ

ಈ) ಬೆಂಗಳೂರು

ಪುಣೆ

ಪುಣೆಯಲ್ಲಿ ದೇಶದ ಮೊದಲ ಕ್ರೀಡಾ ಧ್ಯೇಯ ಆಧರಿತ ಸಾಹಿತ್ಯ ಉತ್ಸವ “SporTale” ಫೆಬ್ರವರಿ 2 ರಿಂದ ಎರಡು ದಿನಗಳ ಕಾಲ ಜರುಗಿತು.

www.karunaduexams.com

121. ಸಾರ್ವಜನಿಕ ವಲಯದ ಯಾವ ಬ್ಯಾಂಕ್ ಡಿಜಿಟಲ್ ಪಾವತಿಗೋಸ್ಕರ "Bataua" ಹೆಸರಿನ ಮೊಬೈಲ್ ವ್ಯಾಲೆಟ್ ಬಿಡುಗಡೆಗೊಳಿಸಿದೆ?

ಅ) ಪಂಜಾಬ್ ನ್ಯಾಷನಲ್ ಬ್ಯಾಂಕ್

ಆ) ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

ಇ) ಒರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್

ಈ) ಭಾರತೀಯ ಸ್ಟೇಟ್ ಬ್ಯಾಂಕ್

ಒರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್

ಒರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್ ತನ್ನ ಗ್ರಾಹಕರಿಗೆ 75ನೇ ಸಂಸ್ಥಾಪನ ದಿನದ ಅಂಗವಾಗಿ Bataua ಮೊಬೈಲ್ ವ್ಯಾಲೆಟ್ ಬಿಡುಗಡೆಗೊಳಿಸಿದೆ.

122. "ವಿಶ್ವಸಂಸ್ಥೆಯ ವಿಶ್ವ ಸಾಮಾಜಿಕ ನ್ಯಾಯ ದಿನ"ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಫೆಬ್ರವರಿ 19

ಆ) ಫೆಬ್ರವರಿ 20

ಇ) ಫೆಬ್ರವರಿ 21

ಈ) ಫೆಬ್ರವರಿ 22

ಫೆಬ್ರವರಿ 20

ವಿಶ್ವಸಂಸ್ಥೆಯ ವಿಶ್ವ ಸಾಮಾಜಿಕ ನ್ಯಾಯ ದಿನ"ವನ್ನು ಪ್ರತಿವರ್ಷ ಫೆಬ್ರವರಿ 20 ರಂದು ಆಚರಿಸಲಾಗುತ್ತದೆ. "Preventing conflict and sustaining peace through decent work" ಇದು ಈ ವರ್ಷದ ಧ್ಯೇಯವಾಕ್ಯ.

www.karunaduexams.com

123. ಇತ್ತೀಚೆಗೆ ನಿಧನರಾದ “ಬನಶ್ರೀ ಸೇನ್ ಗುಪ್ತ”ಯಾವ ರಾಜ್ಯದ ಪ್ರಸಿದ್ಧ ಗಾಯಕಿ?

ಅ) ಓಡಿಶಾ

ಆ) ಕೇರಳ

ಇ) ಪಶ್ಚಿಮ ಬಂಗಾಳ

ಈ) ಜಾರ್ಖಂಡ್

ಪಶ್ಚಿಮ ಬಂಗಾಳ

ಬಂಗಾಳಿ ಭಾಷೆಯ ಪ್ರಸಿದ್ಧ ಗಾಯಕ ಬನಶ್ರೀ ಸೇನ್ ಗುಪ್ತ ಅವರು ಕಲ್ಕತ್ತಾದಲ್ಲಿ ನಿಧನರಾದರು. ಬನಶ್ರೀ ಅವರು ತಮ್ಮ ಮಧುರ ಕಂಠದಿಂದ ಜನಪ್ರಿಯರಾಗಿದ್ದರು. ಬೆಂಗಾಳಿ, ಹಿಂದಿ, ಅಸ್ಸಾಮಿ ಮತ್ತು ಒಡಿಯಾ ಸಿನಿಮಾಗಳಿಗೆ ತಮ್ಮ ಧ್ವನಿಯನ್ನು ನೀಡಿದ್ದರು.

124. 2017 ಬರ್ಲಿನ್ ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿ “ಇಂಟರ್ನ್ಯಾಷನಲ್ ಫೆಡರೇಷನ್ ಆಫ್ ಆರ್ಟ್ ಸಿನಿಮಾ (CICAE)” ಪ್ರಶಸ್ತಿಯನನ್ನು ಪಡೆದುಕೊಂಡ ಭಾರತೀಯ ಸಿನಿಮಾ ಯಾವುದು?

ಅ) ತಿಥಿ

ಆ) ನ್ಯೂಟನ್

ಇ) ಜಲ್

ಈ) ಅಲ್ಲಮ

ನ್ಯೂಟನ್

ರಾಜಕೀಯ ವಿಡಂಬನಾತ್ಮಕ ಸಿನಿಮಾ “ನ್ಯೂಟನ್”ಗೆ 2017 ಬರ್ಲಿನ್ ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿ “ಇಂಟರ್ನ್ಯಾಷನಲ್ ಫೆಡರೇಷನ್ ಆಫ್ ಆರ್ಟ್ ಸಿನಿಮಾ (CICAE)” ಪ್ರಶಸ್ತಿ ಲಭಿಸಿದೆ.

www.karunaduexams.com

125. “2017 ರಾಷ್ಟ್ರೀಯ ಜೀವವೈವಿಧ್ಯ ಕಾಂಗ್ರೆಸ್ (National Biodiversity Congress)” ಯಾವ ರಾಜ್ಯದಲ್ಲಿ ನಡೆಯಲಿದೆ?

ಅ) ಗೋವಾ

ಆ) ಕೇರಳ

ಇ) ಹರಿಯಾಣ

ಈ) ಕರ್ನಾಟಕ

ಕೇರಳ

“2017 ರಾಷ್ಟ್ರೀಯ ಜೀವವೈವಿಧ್ಯ ಕಾಂಗ್ರೆಸ್” ಕೇರಳದ ತಿರುವನಂತಪುರಂನಲ್ಲಿ ಫೆಬ್ರವರಿ 22 ರಿಂದ ನಡೆಯಲಿದೆ. ಕೇರಳ ರಾಜ್ಯ ಜೀವವೈವಿಧ್ಯ ಮಂಡಳಿ ಈ ಕಾಂಗ್ರೆಸ್ ಅನ್ನು ಆಯೋಜಿಸುತ್ತಿದೆ.

126. 2017 ಬರ್ಲಿನ್ ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿ “ಗೋಲ್ಡನ್ ಬೇರ್ (Golden Bear)” ಪ್ರಶಸ್ತಿಯನ್ನು ಗೆದ್ದುಕೊಂಡ ಸಿನಿಮಾ ಯಾವುದು?

ಅ) ಬ್ರೈಟ್ ನೈಟ್ಸ್

ಆ) ಆನ್ ಬಾಡಿ ಅಂಡ್ ಸೋಲ್

ಇ) ಕ್ಲೋಸ್ ನಿಟ್

ಈ) ದಿ ಅದರ್ ಸೈಡ್ ಆಫ್ ಹೋಪ್

ಆನ್ ಬಾಡಿ ಅಂಡ್ ಸೋಲ್

ಹಂಗೇರಿಯ “ಆನ್ ಬಾಡಿ ಅಂಡ್ ಸೋಲ್” ಸಿನಿಮಾಗೆ ಗೋಲ್ಡನ್ ಬೇರ್ ಪ್ರಶಸ್ತಿ ಲಭಿಸಿದೆ. ಅಲ್ಲದೇ ಇನ್ನಿತರ ಎರಡು ಪ್ರಶಸ್ತಿಗಳು ಸಹ ಈ ಸಿನಿಮಾಗೆ ನೀಡಲಾಗಿದೆ.

127. ________ ರಂದು “ಕೇಂದ್ರ ಅಬಕಾರಿ ದಿನ (Central Excise Day)”ವನ್ನು ಆಚರಿಸಲಾಗುತ್ತದೆ?

ಅ) ಫೆಬ್ರವರಿ 22

ಆ) ಫೆಬ್ರವರಿ 23

ಇ) ಫೆಬ್ರವರಿ 24

www.karunaduexams.com

ಈ) ಫೆಬ್ರವರಿ 25

ಫೆಬ್ರವರಿ 23 ರಂದು ಕೇಂದ್ರ ಅಬಕಾರಿ ದಿನವನ್ನು ಆಚರಿಸಲಾಗುವುದು. ಕೇಂದ್ರ ಅಬಕಾರಿ ಮತ್ತು ಉಪ್ಪು, ಕಾಯಿದೆ-1944 ರಲ್ಲಿ ಜಾರಿಗೆ ಬಂದ ದಿನವನ್ನು ಕೇಂದ್ರ ಅಬಕಾರಿ ದಿನವೆಂದು ಆಚರಿಸಲಾಗುತ್ತದೆ.

128. ಯಾವ ರಾಜ್ಯ ಸರ್ಕಾರಿ ಅಧಿಕಾರಿಗಳಿಗೆ ಭ್ರಷ್ಟಾಚಾರ ವಿರೋಧಿ ತರಭೇತಿಯನ್ನು ಕಡ್ಡಾಯಗೊಳಿಸಲಿದೆ?

ಅ) ಕೇರಳ

ಆ) ಮಧ್ಯ ಪ್ರದೇಶ

ಇ) ರಾಜಸ್ತಾನ

ಈ) ಗುಜರಾತ್

ಕೇರಳ

ಕೇರಳ ಸರ್ಕಾರ ತನ್ನ ರಾಜ್ಯದ ಸರ್ಕಾರಿ ಅಧಿಕಾರಿಗಳಿಗೆ ಆರು ದಿನಗಳ ಭ್ರಷ್ಟಾಚಾರ ವಿರೋಧಿ ತರಭೇತಿಯನ್ನು ಕಡ್ಡಾಯಗೊಳಿಸಲಿದೆ. ದೇಶದಲ್ಲೆ ಇದೆ ಮೊದಲ ಬಾರಿಗೆ ಇಂತಹ ತರಭೇತಿಯನ್ನು ಜಾರಿಗೆ ತರಲಾಗುತ್ತಿದೆ.

129. 2016-17 ಇಂಟರ್ನ್ಯಾಷನಲ್ ಮರ್ಕ್ಯೂರಿ ಪ್ರಶಸ್ತಿಯನ್ನು ಗೆದ್ದುಕೊಂಡ ಭಾರತೀಯ ಸಂಸ್ಥೆ ಯಾವುದು?

ಅ) ಎಂಟರ್ಪ್ರೆನರ್ಶಿಪ್ ಡೆವೆಲಪ್ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ

ಆ) ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್

ಇ) ಸೆಂಟ್ರಲ್ ಗ್ಲಾಸ್ ಅಂಡ್ ಸೆರಾಮಿಕ್ ರಿಸರ್ಚ್ ಇನ್ಸ್ಟಿಟ್ಯೂಟ್

ಈ) ಸೆಂಟ್ರಲ್ ಸೈಂಟಿಫಿಕ್ ಅಂಡ್ ರಿಸರ್ಚ್ ಇನ್ಸ್ಟಿಟ್ಯೂಟ್

ಎಂಟರ್ಪ್ರೆನರ್ಶಿಪ್ ಡೆವೆಲಪ್ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ

ಅಹಮದಬಾದ್ ಮೂಲದ ಎಂಟರ್ಪ್ರೆನರ್ಶಿಪ್ ಡೆವೆಲಪ್ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಗೆ 2016-17 ಇಂಟರ್ನ್ಯಾಷನಲ್ ಮರ್ಕ್ಯೂರಿ ಪ್ರಶಸ್ತಿಯನ್ನು ನೀಡಲಾಗಿದೆ.

www.karunaduexams.com

130. 13ನೇ “ರಾಷ್ಟ್ರೀಯ ಕೃಷಿ ವಿಜ್ಞಾನ ಸಮಾವೇಶ (National Agriculture Science Congress)” ಅತಿಥ್ಯವಹಿಸಲಿರುವ ರಾಜ್ಯ ಯಾವುದು?

ಅ) ಕರ್ನಾಟಕ

ಆ) ತಮಿಳುನಾಡು

ಇ) ಮಹಾರಾಷ್ಟ್ರ

ಈ) ಹಿಮಾಚಲ ಪ್ರದೇಶ

ಕರ್ನಾಟಕ

13ನೇ ರಾಷ್ಟ್ರೀಯ ಕೃಷಿ ವಿಜ್ಞಾನ ಸಮಾವೇಶ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಫೆಬ್ರವರಿ 22 ರಂದು ಆರಂಭಗೊಂಡಿತು. ನಾಲ್ಕು ದಿನಗಳ ಕಾಲ ಈ ಸಮಾವೇಶ ನಡೆಯಲಿದ್ದು, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ಐಸಿಎಆರ್ ಹಾಗೂ ನ್ಯಾಷನಲ್ ಅಕಾಡೆಮಿ ಆಫ್ ಅಗ್ರಿಕಲ್ಚರ್ ಸೈನ್ಸ್ ಜಂಟಿಯಾಗಿ ಆಯೋಜಿಸುತ್ತಿವೆ. “Climate Smart Agriculture” ಸಮಾವೇಶದ ಧ್ಯೇಯವಾಕ್ಯವಾಗಿದೆ.

131. ಸ್ಟಾಕ್ ಹೋಮ್ ಇಂಟರ್ನ್ಯಾಷನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್ (SIPRI) ವರದಿ ಪ್ರಕಾರ 2012-16 ಅವಧಿ ವಿಶ್ವದ ಅತಿ ದೊಡ್ಡ ಶಸ್ತ್ರಾಸ್ತ್ರ ಆಮದು ರಾಷ್ಟ್ರ ಯಾವುದು?

ಅ) ಚೀನಾ

ಆ) ರಷ್ಯಾ

ಇ) ಭಾರತ

ಈ) ಅಮೆರಿಕ

ಭಾರತ

ಸ್ಟಾಕ್ ಹೋಮ್ ಇಂಟರ್ನ್ಯಾಷನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್ (SIPRI) ವರದಿಯಂತೆ ಭಾರತ ವಿಶ್ವದ ಅತಿ ದೊಡ್ಡ ಶಸ್ತ್ರಾಸ್ತ್ರ ಆಮದು ರಾಷ್ಟ್ರವಾಗಿ ಹೊರಹೊಮ್ಮಿದೆ. ವಿಶ್ವದ ಶೇ 13% ಶಸ್ತ್ರಾಸ್ತ್ರವನ್ನು ಭಾರತ 2012-16 ಅವಧಿಯಲ್ಲಿ ಆಮದು ಮಾಡಿಕೊಂಡಿದೆ. ಸೌದಿ ಅರೇಬಿಯಾ, ಯುಎಇ, ಚೀನಾ ಮತ್ತು ಅಲ್ಜೀರಿಯಾ ನಂತರದ ಸ್ಥಾನದಲ್ಲಿವೆ.

www.karunaduexams.com

132. ಅಂತಾರಾಷ್ಟ್ರೀಯ ಮಾತೃಭಾಷೆ ದಿನ __________?

ಅ) ಫೆಬ್ರವರಿ 19

ಆ) ಫೆಬ್ರವರಿ 21

ಇ) ಫೆಬ್ರವರಿ 22

ಈ) ಫೆಬ್ರವರಿ 23

ಫೆಬ್ರವರಿ 21

ಅಂತಾರಾಷ್ಟ್ರೀಯ ಮಾತೃಭಾಷೆ ದಿನವನ್ನು ಫೆಬ್ರವರಿ 21 ರಂದು ಆಚರಿಸಲಾಗುವುದು.

133. ಈ ಕೆಳಗಿನ ಯಾವ ನಗರದಲ್ಲಿ ಗ್ರಾಮೀಣ ಖೇಲ್ ಮಹೋತ್ಸವದ ಮೊದಲ ಆವೃತ್ತಿಯನ್ನು ಆಯೋಜಿಸಲಾಗುತ್ತಿದೆ?

ಅ) ಭೋಪಾಲ್

ಆ) ಗ್ವಾಲಿಯರ್

ಇ) ನವದೆಹಲಿ

ಈ) ಹೈದ್ರಾಬಾದ್

ನವದೆಹಲಿ

ಗ್ರಾಮೀಣ ಖೇಲ್ ಮಹೋತ್ಸವದ ಮೊದಲ ಆವೃತ್ತಿ ಮಾರ್ಚ್ 25 ರಿಂದ ಮಾರ್ಚ್ 31 ರವರೆಗೆ ನವದೆಹಲಿಯಲ್ಲಿ ನಡೆಯಲಿದೆ. ಅಥ್ಲೆಟಿಕ್ಸ್, ಕಬಡ್ಡಿ, ಖೋ-ಖೋ, ವಾಲಿ ಬಾಲ್ ಮತ್ತು ಕುಸ್ತಿ ವಿಭಾಗದಲ್ಲಿ ಕ್ರೀಡೆಗಳು ಜರುಗಲಿವೆ.

134. ಕೇಂದ್ರ ಸರ್ಕಾರ ಇತ್ತೀಚೆಗೆ ಅರುಣ್-3 ಜಲ ವಿದ್ಯುತ್ ಯೋಜನೆಗೆ ಬಂಡವಾಳ ಹೂಡಲು ಸಮ್ಮತಿ ಸೂಚಿಸಿದೆ. ಅಂದಹಾಗೆ ಈ ಯೋಜನೆ ಯಾವ ದೇಶಕ್ಕೆ ಸಂಬಂಧಿಸಿದೆ?

ಅ) ಭೂತಾನ್

ಆ) ನೇಪಾಳ

ಇ) ಶ್ರೀಲಂಕಾ

ಈ) ಸಿಂಗಪುರ

www.karunaduexams.com

ನೇಪಾಳ

ಕೇಂದ್ರ ಆರ್ಥಿಕ ವ್ಯವಹಾರ ಸಚಿವ ಸಂಪುಟ ನೇಪಾಳದ ಅರುಣ್-3 ಜಲ ವಿದ್ಯುತ್ ಯೋಜನೆಗೆ ಬಂಡವಾಳ ಹೂಡುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ. ಈ ಯೋಜನೆಯು 900 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ.

135. ಈ ಕೆಳಗಿನ ಯಾರನ್ನು ಕಾವೇರಿ ನ್ಯಾಯಾಧೀಕರಣದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ?

ಅ) ಗೋಪಾಲ ಗೌಡ

ಆ) ಹರೀಶ್ ಕುಮಾರ್

ಇ) ಅಭಯ್ ಮನೋಹರ್ ಸಪ್ರೆ

ಈ) ಜೆ ಎಸ್ ಖೇಹರ್

ಅಭಯ್ ಮನೋಹರ್ ಸಪ್ರೆ

ನ್ಯಾಯಮೂರ್ತಿ ಅಭಯ್ ಮನೋಹರ್ ಸಪ್ರೆಯವರನ್ನು ನ್ಯಾಯಾಧಿಕರಣದ ಮುಖ್ಯಸ್ಥರನ್ನಾಗಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಜಗದೀಶ್ ಸಿಂಗ್ ಖೇಹರ್ ನೇಮಕ ಮಾಡಿದ್ದಾರೆ. ಬಲ್ಬೀರ್ ಸಿಂಗ್ ಚೌಹಣ್ ಅವರು ಕಾನೂನು ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡ ಕಾರಣ ಈ ಹುದ್ದೆ ತೆರವಾಗಿತ್ತು.

136. ಯಾವ ದೇಶ ಭಯೋತ್ಪಾದಕರನ್ನು ನಿರ್ಮೂಲನೆ ಮಾಡಲು “ರದ್ದ್-ಉಲ್-ಫಸಾದ್ (Radd-ul-Fassad)” ಹೆಸರಿನ ಮಿಲಿಟರಿ ಕಾರ್ಯಾಚರಣೆ ಆರಂಭಿಸಿದೆ?

ಅ) ಸಿರಿಯಾ

ಆ) ಫ್ರಾನ್ಸ್

ಇ) ಪಾಕಿಸ್ತಾನ

ಈ) ಆಫ್ಘಾನಿಸ್ತಾನ

ಪಾಕಿಸ್ತಾನ

ಪಾಕಿಸ್ತಾನ ಸೇನೆ ಭಯೋತ್ಪಾದಕರನ್ನು ನಿರ್ಮೂಲನೆ ಮಾಡಲು “ರದ್ದ್-ಉಲ್-ಫಸಾದ್” ಮಿಲಿಟರಿ ಕಾರ್ಯಾಚರಣೆಯನ್ನು ಆರಂಭಿಸಿದೆ. ಪಾಕಿಸ್ತಾನದ ಮೂರು ವಿಧಧ ಸೇನೆ ಹಾಗೂ ಇತರೆ ಭದ್ರತಾ ಪಡೆಗಳು ಈ

www.karunaduexams.com

ಕಾರ್ಯಾಚರಣೆಯಲ್ಲಿ ಭಾಗವಹಿಸಲಿವೆ. ಪಾಕಿಸ್ತಾನದಲ್ಲಿ ಸಕ್ರಿಯವಾಗಿರುವ ಭಯೋತ್ಪಾದಕರನ್ನು ನಿರ್ಮೂಲನೆ ಮಾಡಿ ಗಡಿ ಸುರಕ್ಷತೆಯನ್ನು ಹೆಚ್ಚಿಸುವುದು ಈ ಕಾರ್ಯಾಚರಣೆಯ ಮುಖ್ಯ ಉದ್ದೇಶ.

137. ದೇಶದ ಮೊದಲ ಹೆಲಿಕಾಪ್ಟರ್ ನಿಲ್ದಾಣ (ಹೆಲಿಪೋರ್ಟ್) ಯಾವ ನಗರದಲ್ಲಿ ಕಾರ್ಯಾರಂಭ ಮಾಡಲಿದೆ?

ಅ) ನವದೆಹಲಿ

ಆ) ಬೆಂಗಳೂರು

ಇ) ಚೆನ್ನೈ

ಈ) ಕಲ್ಕತ್ತಾ

ನವದೆಹಲಿ

ದೇಶದ ಪ್ರಥಮ ಹೆಲಿಕಾಪ್ಟರ್ ನಿಲ್ದಾಣ (ಹೆಲಿಪೋರ್ಟ್) ನವದೆಹಲಿಯಲ್ಲಿ ಫೆಬ್ರವರಿ 28ರಂದು ಕಾರ್ಯಾರಂಭ ಮಾಡಲಿದೆ. ಸರ್ಕಾರಿ ಸ್ವಾಮ್ಯದ ಪವನ್ ಹಂಸ್ ಹೆಲಿಕಾಪ್ಟರ್ ಸಂಸ್ಥೆ ಈ ನಿಲ್ದಾಣದ ನಿರ್ವಹಣೆ ನೋಡಿಕೊಳ್ಳಲಿದೆ. ಸುಮಾರು 100 ಕೋಟಿ ರೂ. ವೆಚ್ಚದಲ್ಲಿ ಉತ್ತರ ದೆಹಲಿಯ ರೋಹಿಣಿ ಪ್ರದೇಶದಲ್ಲಿ ಹೆಲಿಪೋರ್ಟ್ ನಿರ್ಮಿಸಲಾಗಿದೆ. ಈ ನಿಲ್ದಾಣದಲ್ಲಿ ಏಕಕಾಲದಲ್ಲಿ 16 ಹೆಲಿಕಾಪ್ಟರ್ ಗಳು ಇಳಿಯುವ ಮತ್ತು ಮೇಲಕ್ಕೇರುವ ಸ್ಥಳವಾಕಾಶವಿದೆ. ಒಟ್ಟು ಒಂಭತ್ತು ಪಾರ್ಕಿಂಗ್ ಬೇ (ನಿಲ್ದಾಣ ಮಾರ್ಗ) ಸೌಲಭ್ಯ ನೀಡಲಾಗಿದೆ. ಹೆಲಿಪೋರ್ಟಿನ ಟರ್ಮಿನಲ್ ಕಟ್ಟಡವು 150ಕ್ಕೂ ಹೆಚ್ಚು ಪ್ರಯಾಣಿಕರಿಗೆ ಸೌಕರ್ಯ ಒದಗಿಸಲು ಸಜ್ಜಾಗಿದೆ.

138. ಅಂತಾರಾಷ್ಟ್ರೀಯ ಹಾಕಿ ಫೆಡರೇಷನ್ ನ ವರ್ಷದ ಹಾಕಿ ಆಟಗಾರ ಪ್ರಶಸ್ತಿಯನ್ನು ಪಡೆದುಕೊಂಡ "ಜಾನ್ ಜಾನ್ ದೊಹ್ಮೆನ್" ಯಾವ ದೇಶದವರು?

ಅ) ಬೆಲ್ಜಿಯಂ

ಆ) ಸ್ಪೇನ್

ಇ) ಭಾರತ

ಈ) ಆಸ್ಟ್ರೇಲಿಯಾ

www.karunaduexams.com

ಬೆಲ್ಜಿಯಂ

ಬೆಲ್ಜಿಯಂನ ಜಾನ್ ಜಾನ್ ದೊಹ್ಮೆನ್ ಅವರು ಅಂತಾರಾಷ್ಟ್ರೀಯ ಹಾಕಿ ಫೆಡರೇಷನ್ನ ವರ್ಷದ ಹಾಕಿ ಆಟಗಾರ ಪ್ರಶಸ್ತಿಗೆ ಭಾಜನರಾಗಿದ್ದಾರೆ.

139. ಅಮೆರಿಕದ ಅಧ್ಯಕ್ಷರ ಅವಧಿಗೆ ಸಂಬಂಧಿಸಿದಂತೆ ನಡೆಸಲಾದ ಸಮೀಕ್ಷೆಯಲ್ಲಿ ಅತ್ಯುತ್ತಮ ಅಧ್ಯಕ್ಷರಾಗಿ ಯಾರು ಆಯ್ಕೆಯಾಗಿದ್ದಾರೆ?

ಅ) ಫ್ರಾಂಕ್ಲಿನ್ ರೂಸ್ವೆಲ್ಟ್

ಆ) ಅಬ್ರಾಹಾಂ ಲಿಂಕನ್

ಇ) ಜಾರ್ಜ್ ವಾಷಿಂಗ್ಟನ್

ಈ) ಥೀಯೊಡೆರ್ ರೂಸ್ವೆಲ್ಟ್

ಅಬ್ರಾಹಾಂ ಲಿಂಕನ್

ಅಮೆರಿಕದ ಅಧ್ಯಕ್ಷರ ದಿನಕ್ಕೆ ಸಂಬಂಧಿಸಿ ನಡೆಸಲಾದ ಸಮೀಕ್ಷೆಯಲ್ಲಿ ಅಬ್ರಾಹಾಂ ಲಿಂಕನ್ ಅತ್ಯುತ್ತಮ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಜಾರ್ಜ್ವಾಷಿಂಗ್ಟನ್, ಫ್ರಾಂಕ್ಲಿನ್ ರೂಸ್ವೆಲ್ಟ್, ಥೀಯೋಡರ್ ರೂಸ್ವೆಲ್ಟ್, ಡ್ವೈಟ್, ಐಸೋನೋವರ್ ಯಥಾಕ್ರಮವಾಗಿ ದ್ವಿತೀಯ ತೃತೀಯ, ನಾಲ್ಕನೇ ಹಾಗೂ ಐದನನೇ ಸ್ಥಾನವನ್ನು ಗಳಿಸಿದ್ದಾರೆ.

140. ನೊಬೆಲ್ ಪ್ರಶಸ್ತಿ ವಿಜೇತ "ಕೆನ್ನೆಥ್ ಜೆ ಆಯರೋ" ಇತ್ತೀಚೆಗೆ ನಿಧನರಾದರು. ಅಂದಹಾಗೆ ಇವರಿಗೆ ಯಾವ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿತ್ತು?

ಅ) ಅರ್ಥಶಾಸ್ತ್ರ

ಆ) ವೈದ್ಯಕೀಯ

ಇ) ರಸಾಯನ ಶಾಸ್ತ್ರ

ಈ) ಭೌತಶಾಸ್ತ್ರ

ಅರ್ಥಶಾಸ್ತ್ರ

www.karunaduexams.com

ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ನೊಬೆಲ್ ಪ್ರಶಸ್ತಿ ವಿಜೇತ ಕೆನ್ನೆಥ್ ಜೆ ಆಯರೋ ಅವರು ನಿಧನರಾಗಿದ್ದಾರೆ. ಅವರಿಗೆ 95 ವರ್ಷ ವಯಸ್ಸಾಗಿತ್ತು. ಇನ್ನು 1972ರಲ್ಲಿ ಬ್ರಿಟೀಷ್ ಅರ್ಥ ಶಾಸ್ತ್ರಜ್ಞ ಸರ್ ಜಾನ್ ಆರ್ ಹಿಕ್ಸ್ ಅವರೊಂದಿಗೆ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಕೆನ್ನೆಥ್ ಜೆ ಆಯರೋ ಅವರು ಹಂಚಿಕೊಂಡಿದ್ದರು. ಅವರ "ಸಾಮಾನ್ಯ ಆರ್ಥಿಕ ಸಮತೋಲನ ಸಿದ್ದಾಂತ ಮತ್ತು ಜನಕಲ್ಯಾಣ ಸಿದ್ಧಾಂತ ಥಿಯರಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಲಭಿಸಿತ್ತು. ಈ ಪ್ರಶಸ್ತಿಗೆ ಭಾಜನರಾದಾಗ ಅವರ ವಯಸ್ಸು ಕೇವಲ 45 ವರ್ಷಗಳಲಾಗಿತ್ತು. ಹೀಗಾಗಿ ನೊಬೆಲ್ ಪ್ರಶಸ್ತಿ ಪಡೆದ ಅತ್ಯಂತ ಕಿರಿಯ ಅರ್ಥಶಾಸ್ತ್ರಜ್ಞ ಎಂಬ ಕೀರ್ತಿಗೂ ಕೆನ್ನೆಥ್ ಪಾತ್ರರಾಗಿದ್ದರು.

141. ಯಾವ ರಾಜ್ಯದಲ್ಲಿ ದೇಶದಲ್ಲೆ ಪ್ರಥಮ ಬಾರಿಗೆ ಲೈಂಗಿಕ ಅಪರಾಧಿಗಳ ರಿಜಿಸ್ಟರ್ ಅನ್ನು ಆರಂಭಿಸಲಾಗುವುದು?

ಅ) ಕೇರಳ

ಆ) ಮಧ್ಯ ಪ್ರದೇಶ

ಇ) ಮಹಾರಾಷ್ಟ್ರ

ಈ) ಕರ್ನಾಟಕ

ಕೇರಳ

ದೇಶದಲ್ಲೇ ಮೊದಲ ಬಾರಿಗೆ ಕೇರಳ ಸರಕಾರ ಲೈಂಗಿಕ ಅಪರಾಧಿಗಳ ದಾಖಲಾತಿ ಪುಸ್ತಕವನ್ನು (ರಿಜಿಸ್ಟ್ರಿ)ಯನ್ನು ಆರಂಭಿಸಲಿದೆ. ಲೈಂಗಿಕ ಅಪರಾಧಿಗಳ ಈ ರಿಜಿಸ್ಟ್ರಿಯ ಲೈಂಗಿಕ ಅಪರಾಧ ಎಸಗಿದವರ ಎಲ್ಲ ಗುರುತು, ಮಾಹಿತಿ, ವಿವರಗಳನ್ನು ಒಳಗೊಳ್ಳಲಿದೆ ಮತ್ತು ಇದನ್ನು ಸಾರ್ವಜನಿಕ ಅವಲೋಕನಕ್ಕೆ ಉಪಲಬ್ಧಗೊಳಿಸ ಲಾಗುವುದು. ರಾಜ್ಯದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಅಪರಾಧಗಳನ್ನು ತಡೆಯುವ ನಿಟ್ಟಿನಲ್ಲಿ ಇದೊಂದು ಮಹತ್ವದ ಕ್ರಮ ಎನಿಸಲಿದೆ ಮತ್ತು ಇದು ದೇಶದಲ್ಲೇ ಮೊತ್ತ ಮೊದಲನೇಯದ್ದಾಗಲಿದೆ.

142. ವಿಶಾಖಪಟ್ಟಣಂ ನಗರವನ್ನು ದೇಶದ ಮೊದಲ ನಗದು ರಹಿತ ನಗರವನ್ನಾಗಿಸಲು ಆಂಧ್ರ ಪ್ರದೇಶ ಸರ್ಕಾರ ಯಾವ ಪೇಮೆಂಟ್ ನೆಟ್ವರ್ಕ್ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಸಹಿಹಾಕಿದೆ?

ಅ) ವೀಸಾ

ಆ) ಮಾಸ್ಟರ್ ಕಾರ್ಡ್

www.karunaduexams.com

ಇ) ಅಮೆರಿಕನ್ ಎಕ್ಸಪ್ರೆಸ್

ಈ) ಪೇಟಿಎಮ್

ವೀಸಾ

ಆಂಧ್ರ ಪ್ರದೇಶ ಸರ್ಕಾರ ವಿಶಾಖಪಟ್ಟಣಂ ನಗರವನ್ನು ದೇಶದ ಮೊದಲ ನಗದು ರಹಿತ ನಗರವನ್ನಾಗಿಸಲು ವೀಸಾ ಪೇಮೆಂಟ್ ನೆಟ್ವರ್ಕ್ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಸಹಿಹಾಕಿದೆ. ಆ ಮೂಲಕ ವಿಶಾಖಪಟ್ಟಣವನ್ನು ದೇಶದ ಫಿನ್ ಟೆಕ್ ನಗರವನ್ನಾಗಿ ಪರಿವರ್ತಿಸಲಾಗುವುದು.

143. ಪೂಜಾ ಘಟ್ಕರ್ ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಕ್ರಿಕೆಟ್

ಆ) ವಾಲಿ ಬಾಲ್

ಇ) ಶೂಟಿಂಗ್

ಈ) ಟೆನ್ನಿಸ್

ಶೂಟಿಂಗ್

ಭಾರತದ ಪೂಜಾ ಘಟ್ಕರ್ ಅವರು ಡಾ. ಕರಣಿ ಸಿಂಗ್ ಶೂಟಿಂಗ್ ಕೇಂದ್ರದಲ್ಲಿ ನಡೆದ ಅಂತಾರಾಷ್ಟ್ರೀಯ ಶೂಟಿಂಗ್ ಚಾಂಪಿಯನ್ ಷಿಪ್ ಟೂರ್ನಿಯಲ್ಲಿ, ೨೨೮.೮ ಅಂಕಗಳೊಂದಿಗೆ ಕಂಚನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ವಿಭಾಗದ ಬಂಗಾರವನ್ನು ಮೆಂಗ್ಯೊ ಶಿ (೨೫೨.೧) ಪಡೆದುಕೊಂಡರೆ, ದಂಗ್ ಲಿಜೆ (೨೪೮.೯) ಬೆಳ್ಳಿ ಪಡೆದು ಬೀಗಿದ್ದಾರೆ.

144. ಕೇಂದ್ರ ಸರ್ಕಾರ ಇತ್ತೀಚೆಗೆ ಬಿಡುಗಡೆಗೊಳಿಸಿದ “ಸಾಥಿಯ ರಿಸೋರ್ಸ್ ಕಿಟ್ (Saathiya Resource Kit)” ಉದ್ದೇಶ ____________?

ಅ) ಜಿಎಸ್ ಟಿ ತೆರಿಗೆ ಸಂಬಂಧಿಸಿದ ಮಾಹಿತಿ ನೀಡುವುದು

ಆ) ವಯಸ್ಕರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ನೀಡುವುದು

ಇ) ಶೈಕ್ಷಣಿಕ ಕೋರ್ಸ್ ಗಳಿಗೆ ಸಂಬಂಧಿಸಿದ ಮಾಹಿತಿ ನೀಡುವುದು

ಈ) ವಿಮೆ ಯೋಜನೆಗಳ ಬಗ್ಗೆ ಮಾಹಿತಿ ನೀಡುವುದು

ವಯಸ್ಕರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ನೀಡುವುದು

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇತ್ತೀಚೆಗೆ "ಸಾಥಿಯ ರಿಸೋರ್ಸ್ ಕಿಟ್" ಹಾಗೂ "ಸಾಥಿಯಾ ಸಲಹ್" ಮೊಬೈಲ್ ಆ್ಯಪ್ ಬಿಡುಗಡೆಗೊಳಿಸಿದೆ. ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ ಯೋಜನೆಯಡಿ ಈ ಆ್ಯಪ್ ಗಳನ್ನು ಬಿಡುಗಡೆಗೊಳಿಸಲಾಗಿದ್ದು, ಹದಿಹರೆಯದವರ ಆರೋಗ್ಯ ಸೇವೆಗಳ ಬಗ್ಗೆ ಮಾಹಿತಿಯನ್ನು ಈ ಕಿಟ್ ಒದಗಿಸಲಿದೆ.

145. "Kohinoor: The Story of the World's Most Infamous Diamond" ಪುಸ್ತಕದ ಲೇಖಕರು ________?

ಅ) ರಮೇಶ್ ಮುಖರ್ಜಿ

ಆ) ವೀರಪ್ಪ ಮೊಯ್ಲಿ

ಇ) ವಿಲಿಯಂ ಡಾರ್ಲಿಂಪಲ್

ಈ) ಖುಷಿ ಸಿಂಗ್

ವಿಲಿಯಂ ಡಾರ್ಲಿಂಪಲ್

ಪ್ರಖ್ಯಾತ ಇತಿಹಾಸಗಾರ ಹಾಗೂ ಪ್ರಶಸ್ತಿ ವಿಜೇತ ಲೇಖಕ "ವಿಲಿಯಂ ಡಾರ್ಲಿಂಪಲ್ ಅವರು ಪುಸ್ತಕದ ಲೇಖಕರು. ಪುಸ್ತಕದಲ್ಲಿ ಭಾರತದ ಪ್ರಸಿದ್ಧ ವಜ್ರ ಕೊಹಿನೂರ್ ಬಗ್ಗೆ ವಿವರಿಸಲಾಗಿದೆ.

146. ಅರ್ನ್ಸ್ಟ್ & ಯಂಗ್ ಸಂಸ್ಥೆ ನೀಡುವ 2016ನೇ ವರ್ಷದ ಭಾರತೀಯ ಉದ್ಯಮಿ ಪ್ರಶಸ್ತಿ ಯಾರಿಗೆ ಲಭಿಸಿದೆ?

ಅ) ಮುಖೇಶ್ ಅಂಬಾನಿ

ಆ) ಪಿಯುಷ್ ಗೋಯೆಲ್

ಇ) ವಿವೇಕ್ ಚಾಂದ್ ಸೆಹ್ಗಲ್

ಈ) ನಾರಾಯಣ ಮೂರ್ತಿ

ವಿವೇಕ್ ಚಾಂದ್ ಸೆಹ್ಗಲ್

ಆಟೊ ಬಿಡಿ ಭಾಗ ತಯಾರಿಕ ಸಂಸ್ಥೆ ಮದರ್ಸನ್ ಸುಮಿ ಸಿಸ್ಟಮ್ಸ್ ಲಿಮಿಟೆಡ್ ಸಂಸ್ಥೆಯ ಮುಖ್ಯಸ್ಥ ವಿವೇಕ್ ಚಾಂದ್ ಸೆಹ್ಗಲ್ ಅವರಿಗೆ ಅರ್ನ್ಸ್ಟ್ & ಯಂಗ್ ಸಂಸ್ಥೆ ನೀಡುವ 2016ನೇ ವರ್ಷದ ಭಾರತೀಯ ಉದ್ಯಮಿ ಪ್ರಶಸ್ತಿ ಲಭಿಸಿದೆ. ಆಧಾರ್ ಪ್ರಾಧಿಕಾರದ ಮಾಜಿ ಮುಖ್ಯಸ್ಥ ನಂದನ್ ನೀಲಕೇಣಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಲಭಿಸಿದೆ.

www.karunaduexams.com

147. ವಿಶ್ವ ಪ್ರಸಿದ್ಧ “ರುಮ್‌ಟೆಕ್ ಬೌದ್ಧ ಚಕ್ರ ವಿಹಾರ” ಯಾವ ರಾಜ್ಯದಲ್ಲಿದೆ?

ಅ) ಸಿಕ್ಕಿಂ

ಆ) ಜಮ್ಮು ಮತ್ತು ಕಾಶ್ಮೀರ

ಇ) ತ್ರಿಪುರ

ಈ) ಮೀಜೋರಾಂ

ಸಿಕ್ಕಿಂ

“ರುಮ್‌ಟೆಕ್ ಬೌದ್ಧ ಚಕ್ರ ವಿಹಾರ ಸಿಕ್ಕಿಂನ ರಾಜಧಾನಿ ಗ್ಯಾಂಟಕ್ ಸಮೀಪದಲ್ಲಿದೆ. ಇದು ಭಾರತದ ಬೌದ್ಧ ವಿಹಾರಗಳಲ್ಲೇ ಅತಿ ಶ್ರೀಮಂತವಾದದ್ದು.

148. “ಅಂತಾರಾಷ್ಟ್ರೀಯ ವಾಯು ಸಾರಿಗೆ ಒಕ್ಕೂಟ (International Air Transport Association)”ದ ಕೇಂದ್ರ ಕಚೇರಿ ಎಲ್ಲಿದೆ?

ಅ) ಬ್ರೆಜಿಲ್

ಆ) ಕೆನಡಾ

ಇ) ಸ್ವಿಟ್ಜರ್ಲ್ಯಾಂಡ್

ಈ) ಆಸ್ಟ್ರೇಲಿಯಾ

ಕೆನಡಾ

ಅಂತಾರಾಷ್ಟ್ರೀಯ ವಾಯು ಸಾರಿಗೆ ಒಕ್ಕೂಟದ ಕೇಂದ್ರ ಕಚೇರಿ ಕೆನಡಾದ ಮಾಂಟ್ರಿಯಲ್ ನಲ್ಲಿದೆ.

149. ಯಾವ ರಾಜ್ಯ ಎಲ್ಲಾ ಖಾಸಗಿ ಶಾಲೆಗಳಲ್ಲಿ ಕಡ್ಡಾಯವಾಗಿ ಸೋಲಾರ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಆದೇಶ ಹೊರಡಿಸಿದೆ?

ಅ) ರಾಜಸ್ತಾನ

ಆ) ಹರಿಯಾಣ

ಇ) ಮಧ್ಯ ಪ್ರದೇಶ

ಈ) ಜಾರ್ಖಂಡ್

www.karunaduexams.com

ಹರಿಯಾಣ

ಹರಿಯಾಣ ರಾಜ್ಯ ಸರ್ಕಾರ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಸೋಲಾರ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಿದೆ. ಇದಕ್ಕಾಗಿ ಪ್ರತಿ ಕಿಲೋ ವ್ಯಾಟಿಗೆ ರೂ 20,000 ಪ್ರೋತ್ಸಾಹ ಧನವನ್ನು ಶಾಲೆಗಳಿಗೆ ನೀಡಲಾಗುವುದು. ಜೂನ್ ಮತ್ತು ಜುಲೈ ಅವಧಿಯಲ್ಲಿ ಉತ್ಪಾದನೆಯಾಗುವ ಸೌರ ವಿದ್ಯುತ್ ಅನ್ನು ಗ್ರಿಡ್ ಗಳಿಗೆ ಸಂಪರ್ಕ ನೀಡಲಾಗುವುದು.

150. ಈ ಕೆಳಗಿನ ಯಾರು "ಸ್ವಚ್ಚ ಭಾರತ ಅಭಿಯಾನ"ದ ನೂತನ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ?

ಅ) ಶಿಲ್ಪಾ ಶೆಟ್ಟಿ

ಆ) ಮಾಧುರಿ ದೀಕ್ಷಿತ್

ಇ) ದೀಪಿಕಾ ಪಡುಕೋಣೆ

ಈ) ಕಂಗಾನ ರಾವತ್

ಶಿಲ್ಪಾ ಶೆಟ್ಟಿ

ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಅವರು ಸ್ವಚ್ಚ ಭಾರತ ಅಭಿಯಾನದ ನೂತನ ರಾಯಭಾರಿಯಾಗಿ ನೇರ್ಮಡೆಗೊಂಡಿದ್ದಾರೆ. ಆ ಮೂಲಕ ರಸ್ತೆಗಳಲ್ಲಿ ಉಗುಳದಂತೆ ಟಿವಿ ಮತ್ತು ರೇಡಿಯೊ ಮೂಲಕ ಪ್ರಚಾರ ನಡೆಸಲಿದ್ದಾರೆ. ಅಮಿತಾಬ್ ಬಚ್ಚನ್, ಶಂಕರ್ ಮಹದೇವನ್, ಸಚಿನ್ ತೆಂಡುಲ್ಕರ್ ಮತ್ತು ಸಲ್ಮಾನ್ ಖಾನ್ ಅಭಿಯಾನದ ರಾಯಭಾರಿಗಳಾಗಿದ್ದಾರೆ.

151. ವಿಶ್ವ ಬ್ಯಾಡ್ಮಿಂಟನ್ ಫೆಡರೇಶನ್ ನಲ್ಲಿ ಐಒಸಿ ಅಥ್ಲೇಟ್ಸ್ ಕಮೀಷನ್ ಪ್ರತಿನಿಧಿಸಲಿರುವ ಭಾರತೀಯ ಕ್ರೀಡಾಪಟು ಯಾರು?

ಅ) ಸೈನಾ ನೆಹ್ವಾಲ್

ಆ) ಪಿ ವಿ ಸಿಂಧು

ಇ) ಗೀತಾ ಪೊಗಟ್

ಈ) ಕಿಡಂಬಿ ಶ್ರೀಕಾಂತ್

ಸೈನಾ ನೆಹ್ವಾಲ್

www.karunaduexams.com

ಭಾರತದ ಖ್ಯಾತ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಅವರು ವಿಶ್ವ ಬ್ಯಾಡ್ಮಿಂಟನ್ ಫೆಡರೇಶನ್ ನಲ್ಲಿ ಐಓಸಿ ಅಥ್ಲೇಟ್ಸ್ ಕಮೀಷನ್ ಪ್ರತಿನಿಧಿಸಲಿದ್ದಾರೆ. ಭಾರತೀಯ ಕ್ರೀಡಾಪಟುಗೆ ಸಲ್ಲುತ್ತಿರುವ ಅಪರೂಪದ ಗೌರವ ಇದಾಗಿದೆ. ಸೈನಾ ಅವರು 2016 ರಲ್ಲಿ ಐಓಸಿ ಅಥ್ಲೇಟ್ಸ್ ಕಮೀಷನ್ನ ಸದಸ್ಯರಾಗಿ ನೇಮಕಗೊಂಡಿದ್ದರು.

152. 89ನೇ ಆಸ್ಕರ್ ಅಕಾಡೆಮಿ ಪ್ರಶಸ್ತಿಯಲ್ಲಿ ಅತ್ಯುತ್ತಮ ಪ್ರಶಸ್ತಿಯನ್ನು ಪಡೆದುಕೊಂಡ ಸಿನಿಮಾ ಯಾವುದು?

ಅ) ಲಾ ಲಾ ಲ್ಯಾಂಡ್

ಆ) ಮೂನ್ ಲೈಟ್

ಇ) ಹಿಡನ್ ಫಿಗರ್ಸ್

ಈ) ಸ್ಟೋರಿ ಆಫ್ ಯೂರ್ ಲೈಫ್

ಮೂನ್ ಲೈಟ್

ಅಮೆರಿಕದ ಮೂನ್ ಲೈಟ್ ಸಿನಿಮಾ 89ನೇ ಆಸ್ಕರ್ ಅಕಾಡೆಮಿ ಪ್ರಶಸ್ತಿಯಲ್ಲಿ ಅತ್ಯುತ್ತಮ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಬ್ಯಾರಿ ಜೆಂಕಿನ್ಸ್ ಅವರು ಈ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಈ ಚಿತ್ರದ ಮೂಲದ ಮಹೆರ್ಶಾಲ ಅಲಿ ಅವರು ಆಸ್ಕರ್ ಪ್ರಶಸ್ತಿಯನ್ನು ಪಡೆದುಕೊಂಡ ಮೊದಲ ಮುಸ್ಲಿಂ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ಮೂನ್ ಲೈಟ್ ಚಿತ್ರದಲ್ಲಿನ ಪೋಷಕಪಾತ್ರಕ್ಕಾಗಿ ಅಲಿ ಅವರಿಗೆ ಆಸ್ಕರ್ ಪ್ರಶಸ್ತಿ ಲಭಿಸಿದೆ.

153. ದೂರದ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹೃದಯ ಕಾಯಿಲೆಯ ಚಿಕಿತ್ಸೆಗಾಗಿ "ರಹತ್ (RAHAT)" ಯೋಜನೆಯನ್ನು ಯಾವ ರಾಜ್ಯ ಜಾರಿಗೊಳಿಸಿದೆ?

ಅ) ಗುಜರಾತ್

ಆ) ಗೋವಾ

ಇ) ರಾಜಸ್ತಾನ

ಈ) ಪಶ್ಚಿಮ ಬಂಗಾಳ

ರಾಜಸ್ತಾನ

ರಾಜಸ್ತಾನ ಸರ್ಕಾರ "ರಾಜಸ್ತಾನ ಹಾರ್ಟ್ ಆಟ್ಯಾಕ್ ಟ್ರೀಟ್ಮೆಂಟ್ ಪ್ರೋಗ್ರಾಂ (Rajasthan Heart Attack Treatment Programme)" ಹೆಸರಿನ ವೈದ್ಯಕೀಯ ಯೋಜನೆಗೆ ಜೈಪುರದ ಎಟರ್ನಲ್ ಆಸ್ಪತ್ರೆಯಲ್ಲಿ ಆರಂಭಿಸಿದೆ.



www.karunaduexams.com

ಈ ಯೋಜನೆಯಡಿ ಹಾರ್ಟ್ ಅಟ್ಯಾಕ್ ರೋಗಿಗಳಿಗೆ ತುರ್ತು ಅಂಬುಲೆನ್ಸ್ ಸೇವೆ ಹಾಗೂ ಟೆಲಿಮೆಡಿಸಿನ್ ಸೇವೆಯನ್ನು ಒದಗಿಸಲಾಗುವುದು.

154. ಯಾವ ರಾಜ್ಯದಲ್ಲಿ ಭಾರತದ ಮೊದಲ ಗಿರಿಧಾಮ ಸೈಕಲ್ ಪಥವನ್ನು ಆರಂಭಿಸಲಾಗಿದೆ?

ಅ) ಓಡಿಶಾ

ಆ) ಪಶ್ಚಿಮ ಬಂಗಾಳ

ಇ) ತಮಿಳುನಾಡು

ಈ) ತೆಲಂಗಣ

ಪಶ್ಚಿಮ ಬಂಗಾಳ

ದೇಶದ ಮೊದಲ ಗಿರಿಧಾಮ ಸೈಕಲ್ ಪಥವನ್ನು ಪಶ್ಚಿಮ ಬಂಗಾಳದ ಡಾರ್ಜಲಿಂಗ್ ನಲ್ಲಿ ಆರಂಭಿಸಲಾಗಿದೆ. ಪಶ್ಚಿಮ ಬಂಗಾಳದ ಸೆಂಚಾಲ್ ವನ್ಯಜೀವಿಧಾಮದ ಮುಖಾಂತರ ಈ ಸೈಕಲ್ ಪಥ ಹಾದುಹೋಗಲಿದೆ.

155. ಪ್ರಧಾನಿ ಮೋದಿ ರವರು ವಿಶ್ವದ ಅತಿ ಎತ್ತರದ ಶಿವನ ಪ್ರತಿಮೆಯನ್ನು ಯಾವ ರಾಜ್ಯದಲ್ಲಿ ಆನಾವರಣಗೊಳಿಸಿದರು?

ಅ) ಕೇರಳ

ಆ) ತಮಿಳುನಾಡು

ಇ) ತೆಲಂಗಣ

ಈ) ಆಂಧ್ರ ಪ್ರದೇಶ

ತಮಿಳುನಾಡು

ತಮಿಳುನಾಡಿನ ಕೊಯಂಬತ್ತೂರಿನಲ್ಲಿ ಇಶಾ ಫೌಂಡೇಷನ್ ನಿರ್ಮಿಸಿರುವ ವಿಶ್ವದ ಅತಿ ಎತ್ತರದ ಶಿವನ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅನಾವರಣಗೊಳಿಸಿದ್ದಾರೆ. ಸದ್ಗುರು ಜಗ್ಗಿ ವಾಸುದೇವ್ ಅವರ ಇಶಾ ಫೌಂಡೇಷನ್ ನಿರ್ಮಿಸಿರುವ ಧ್ಯಾನ ಭಂಗಿಯಲ್ಲಿ ಕುಳಿತಿರುವ 112 ಅಡಿ ಎತ್ತರದ ಪರಶಿವನ ಪ್ರತಿಮೆಯನ್ನು ಪ್ರಧಾನಿ ಲೋಕಾರ್ಪಣೆಗೊಳಿಸಿದರು.

www.karunaduexams.com

156. ಏಕದಿನ ಕ್ರಿಕೆಟ್ ನಲ್ಲಿ ಅತಿ ವೇಗದ 9 ಸಾವಿರ ರನ್ ಪೂರೈಸಿದ ದಾಖಲೆ ನಿರ್ಮಿಸಿದ ಕ್ರಿಕೆಟ್ ಆಟಗಾರ ___________________?

ಅ) ಎಬಿ ಡಿವಿಲಿಯರ್ಸ್

ಆ) ವಿರಾಟ್ ಕೊಹ್ಲಿ

ಇ) ರಾಸ್ ಟೇಲರ್

ಈ) ಎಂ ಎಸ್ ಧೋನಿ

ಎಬಿ ಡಿವಿಲಿಯರ್ಸ್

ದಕ್ಷಿಣ ಆಫ್ರಿಕಾದ ಸ್ಫೋಟಕ ಬ್ಯಾಟ್ಸಮನ್ ಎಬಿ ಡಿವಿಲಿಯರ್ಸ್ ಮತ್ತೊಂದು ದಾಖಲೆ ನಿರ್ಮಿಸಿದ್ದು, ಏಕದಿನ ಕ್ರಿಕೆಟ್ ನಲ್ಲಿ ಅತಿ ವೇಗದ 9 ಸಾವಿರ ರನ್ ಪೂರೈಸಿದ ದಾಖಲೆ ನಿರ್ಮಿಸಿದ್ದಾರೆ. ಹ್ಯಾಮಿಲ್ಟನ್ ನಲ್ಲಿ ನಡೆದ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಎಬಿಡಿ ಈ ಸಾಧನೆ ಮಾಡಿದ್ದು, ಎಬಿಡಿ 37 ರನ್ ಗಳಿಸುತ್ತಿದ್ದಂತೆಯೇ ಸೌರವ್ ಗಂಗೂಲಿ ದಾಖಲೆಯನ್ನು ಹಿಂದಿಕ್ಕಿದ್ದಾರೆ. ಈ ಹಿಂದೆ ಭಾರತದ ಮಾಜಿ ನಾಯಕ ಸೌರವ್ ಗಂಗೂಲಿ 228 ಇನ್ನಿಂಗ್ಸ್ ಗಳಲ್ಲಿ 98 ಸಾವಿರ ರನ್ ಪೂರೈಸಿದ್ದರೆ ಎಬಿಡಿ ಕೇವಲ 205 ಇನ್ನಿಂಗ್ಸ್ ಗಳಲ್ಲಿ 9 ಸಾವಿರ ರನ್ ಪೂರೈಸಿದ್ದರು. ಆ ಮೂಲಕ 13 ವರ್ಷಗಳ ಬಳಿಕ ಸೌರವ್ ಗಂಗೂಲಿ ದಾಖಲೆಯನ್ನು ಎಬಿಡಿ ಮುರಿದಿದ್ದಾರೆ. ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ 9 ಸಾವಿರ ರನ್ ಪೂರೈಕೆಗಾಗಿ 235 ಇನ್ನಿಂಗ್ಸ್ ತೆಗೆದುಕೊಂಡಿದ್ದರು.

157. 2017 ಕೋಲ್ ಇಂಡಿಯಾ ಹಾಕಿ ಇಂಡಿಯಾ ಲೀಗ್ ನಲ್ಲಿ ಪ್ರಶಸ್ತಿ ಗೆದ್ದ ತಂಡ ಯಾವುದು?

ಅ) ದೆಹಲಿ ವೇವ್ ರೈಡರ್ಸ್

ಆ) ದಬಾಂಗ್ ಮುಂಬೈ

ಇ) ಉತ್ತರ ಪ್ರದೇಶ ವಿಝಾರ್ಡ್

ಈ) ಕಳಿಂಗ ಲ್ಯಾನ್ಸರ್ಸ್

ಕಳಿಂಗ ಲ್ಯಾನ್ಸರ್ಸ್

www.karunaduexams.com

ಕಳಿಂಗ ಲ್ಯಾನ್ಸರ್ಸ್ ತಂಡ 2017 ಕೋಲ್ ಇಂಡಿಯಾ ಹಾಕಿ ಇಂಡಿಯಾ ಲೀಗ್ ನಲ್ಲಿ ಪ್ರಶಸ್ತಿ ಗೆದ್ದುಕೊಂಡಿತು. ಫೈನಲ್ ಪಂದ್ಯದಲ್ಲಿ ದಬಾಂಗ್ ಮುಂಬೈಯನ್ನು ಸೋಲಿಸಿ ಪ್ರಶಸ್ತಿಯನ್ನು ಬಾಚಿಕೊಂಡಿತು.

158. ಇತ್ತೀಚೆಗೆ ಭಾರತ ಈ ಕೆಳಗಿನ ಯಾವ ದೇಶದೊಂದಿಗೆ ಸಾಮಾಜಿಕ ಭದ್ರತಾ ಒಪ್ಪಂದಕ್ಕೆ ಸಹಿಹಾಕಿದೆ?

ಅ) ಜಪಾನ್

ಆ) ಜರ್ಮನಿ

ಇ) ಫ್ರಾನ್ಸ್

ಈ) ಅಮೆರಿಕ

ಜರ್ಮನಿ

ಭಾರತ ಮತ್ತು ಜರ್ಮನಿ ನಡುವಿನ ಸಾಮಾಜಿಕ ಭದ್ರತಾ ಒಪ್ಪಂದವನ್ನು ಉಭಯ ದೇಶಗಳು ಅನುಮೋದಿಸಿವೆ. ಮೇ 1 ರಿಂದ ಈ ಒಪ್ಪಂದ ಜಾರಿಗೆ ಬರಲಿದ್ದು, ಉಭಯ ದೇಶಗಳ ನಡುವೆ ಬಂಡವಾಳ ಹರಿಯುವಿಕೆ ಹೆಚ್ಚಿಸಲು ಸಹಾಯವಾಗಲಿದೆ.

159. ನ್ಯೂ ವರ್ಲ್ಡ್ ವೆಲ್ತ್ ವರದಿ ಪ್ರಕಾರ ಭಾರತದ ಅತ್ಯಂತ ಶ್ರೀಮಂತ ನಗರ ಯಾವುದು?

ಅ) ಬೆಂಗಳೂರು

ಆ) ಮುಂಬೈ

ಇ) ಹೈದ್ರಾಬಾದ್

ಈ) ಚೆನ್ನೈ

ಮುಂಬೈ

ಭಾರತದ ಆರ್ಥಿಕ ರಾಜಧಾನಿ ಮುಂಬೈ ಭಾರತದ ಶ್ರೀಮಂತ ನಗರ ಎಂಬ ಹಿರಿಮೆಗೆ ಪಾತ್ರವಾಗಿದೆ. ರಾಜ್ಯ ರಾಜಧಾನಿ ಬೆಂಗಳೂರು ಈ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ.

ಮುಂಬೈನಲ್ಲಿ 46 ಸಾವಿರ ಲಕ್ಷಾಧಿಪತಿಗಳು ಮತ್ತು 28 ಜನ ಕೋಟ್ಯಧಿಪತಿಗಳು ನೆಲೆಯೂರಿದ್ದಾರೆ. ಮುಂಬೈನಲ್ಲಿರುವ ಸಂಪತ್ತಿನ ಪ್ರಮಾಣ 820 ಬಿಲಿಯನ್ ಅಮೆರಿಕನ್ ಡಾಲರ್ (₹ 54.94 ಲಕ್ಷ ಕೋಟಿ) ಎಂದು ನ್ಯೂ ವರ್ಲ್ಡ್ ವೆಲ್ತ್ ವರದಿ ತಿಳಿಸಿದೆ. ರಾಷ್ಟ್ರ ರಾಜಧಾನಿ ನವದೆಹಲಿ 23 ಸಾವಿರ ಲಕ್ಷಾಧಿಪತಿಗಳು ಮತ್ತು 18 ಕೋಟ್ಯಧಿಪತಿಗಳನ್ನು ಹೊಂದಿದೆ. 450 ಬಿಲಿಯನ್ ಡಾಲರ್ (₹ 30.15 ಲಕ್ಷ ಕೋಟಿ) ಶ್ರೀಮಂತಿಕೆ ಹೊಂದಿದೆ.

160. ವಿದೇಶಾಂಗ ವ್ಯವಹಾರ ಸಚಿವಾಲಯದ ನೂತನ ವಕ್ತಾರ (Spokeperson)ರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ವಿಕಾಸ್ ಸ್ವರೂಪ್

ಆ) ಗೋಪಾಲ್ ಬಗ್ಲೆ

ಇ) ಪಿ ಬಷಿಯಾ

ಈ) ಸೋನಿಯಾ ನಾರಂಗ್

ಗೋಪಾಲ್ ಬಗ್ಲೆ

ಭಾರತೀಯ ವಿದೇಶ ಸೇವೆ (ಐಎಫ್ಎಸ್)ಯ ಹಿರಿಯ ಅಧಿಕಾರಿ ಗೋಪಾಲ್ ಬಗ್ಲೆ ಅವರು ವಿದೇಶಾಂಗ ವ್ಯವಹಾರ ಸಚಿವಾಲಯದ ನೂತನ ವಕ್ತಾರರಾಗಿ ನೇಮಕಗೊಂಡಿದ್ದಾರೆ.

www.karunaduexams.com